ಸಂಪುಟ 01 । ಸಂಚಿಕೆ 161 ಶನಿವಾರ 15 ಆಗಸ್ಟ್ 2026 । ಪುಟ 4 । ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೇಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂಗೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1) ಭಾರತದ ಸ್ವಾತಂತ್ರ್ಯ ದಿನಾಚರಣೆ (Independence Day)

ಪ್ರತಿ ವರ್ಷ ಆಗಸ್ಟ್ 15ರಂದು ಭಾರತದಲ್ಲಿ ಸ್ವಾತಂತ್ರ್ಯ ದಿನವನ್ನು ಆಚರಿಸಲಾಗುತ್ತದೆ. 1947ರ ಆಗಸ್ಟ್ 15ರಂದು ಭಾರತವು ಬ್ರಿಟಿಷರ ಆಳ್ವಿಕೆಯಿಂದ ಸ್ವಾತಂತ್ರ್ಯ ಪಡೆದಿತು.

2) ದಕ್ಷಿಣ ಕೊರಿಯಾ ವಿಮೋಚನಾ ದಿನ

ಆಗಸ್ಟ್ 15ರಂದು ದಕ್ಷಿಣ ಕೊರಿಯಾದಲ್ಲಿ ಗ್ವಾಂಗ್‌ಬೋಕ್ಜಿಯೋಲ್ (Gwangbokjeol) ಆಚ-ರಿಸಲಾಗುತ್ತದೆ.

3. ಕಾಂಗೋ ಗಣರಾಜ್ಯ ಸ್ವಾತಂತ್ರ್ಯ ದಿನ

ಆಗಸ್ಟ್ 15ರಂದು ಕಾಂಗೋ ಗಣರಾಜ್ಯ ತನ್ನ ಸ್ವಾತಂತ್ರ್ಯ ದಿನವನ್ನು ಆಚರಿಸುತ್ತದೆ.

## ಸುಭಾಷಿತ

ಲೋಕದಲ್ಲಿ ಯಾವ ಮಾನವನೂ ಪೂರ್ಣ ಸುಖಿಯೂ ಅಲ್ಲ; ಪೂರ್ಣ ದುಃಖಿಯೂ ಅಲ್ಲ.

-ತ. ರಾ. ಸು

# ಸಂಪುಟದಲ್ಲಿ ಮಹಿಳೆಯರ ಪ್ರಾತಿನಿಧ್ಯ ನಿರ್ಲಕ್ಷ್ಯ ಖಂಡಿಸಿ, ಬಿಜೆಪಿ ಪ್ರತಿಭಟನಾ

ನೈಜ್ಯ ದೇಸೆ ನ್ಯೂಸ್

**ಬೆಂಗಳೂರು: ರಾಜ್ಯ ಸಚಿವ ಸಂಪುಟದಲ್ಲಿ ಮಹಿಳೆಯರಿಗೆ ಪ್ರಾತಿನಿಧ್ಯ ನೀಡದಿರುವುದನ್ನು ಖಂಡಿಸಿ ಬಿಜೆಪಿಯ ಶಾಸಕರುಗಳು ಇಂದು ಪ್ರತಿಭಟನಾ ಧರಣಿ ನಡೆಸಿದರು**

ವಿಧಾನಸೌಧದ ಭುವನೇಶ್ವರಿ ಪ್ರತಿಮೆ ಬಳಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ವಿರೋಧ ಪಕ್ಷದ ನಾಯಕರುಗಳಾದ ಆರ್. ಅಶೋಕ್, ಚಲವಾದಿ ನಾರಾಯಣಸ್ವಾಮಿ ನೇತೃತ್ವದಲ್ಲಿ ಬಿಜೆಪಿಯ ವಿಧಾನಸಭೆ ಹಾಗೂ ವಿಧಾನಪರಿಷತ್‌ನ ಎಲ್ಲ ಸದಸ್ಯರು ಈ ಪ್ರತಿಭಟನಾ ಧರಣಿಯಲ್ಲಿ ಭಾಗಿಯಾಗಿ ಸಚಿವ ಸಂಪುಟದಲ್ಲಿ ಮಹಿಳೆಯರಿಗೆ ಪ್ರಾತಿನಿಧ್ಯ ನೀಡದಿರುವುದನ್ನು ಖಂಡಿಸಿ ಘೋಷಣೆಗಳನ್ನು ಕೂಗಿದರು. ಈ ಸಂದರ್ಭದಲ್ಲಿ ಮಾತನಾಡಿದ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ, ವಿಧಾನಸೌಧದ ಮುಂದಿರುವ ತಾಯಿ ಭುವನೇಶ್ವರಿ ಪ್ರತಿಮೆ ಬಳಿ ನಾವು ಪ್ರತಿಭಟನೆ ಮಾಡುತ್ತಿದ್ದೇವೆ. ದೇಶದಲ್ಲಿ ಮಹಿಳೆಯರ ಸಂಖ್ಯೆ ಹೆಚ್ಚಿದೆ. ಕೇಂದ್ರದಲ್ಲಿ




ಮಹಿಳಾ ಮೀಸಲಾತಿ ಜಾರಿ ಮಾಡಲು ಕಾಂಗ್ರೆಸ್ ವಿರೋಧ ವ್ಯಕ್ತ ಮಾಡಿತ್ತು. ಕರ್ನಾಟಕದಲ್ಲೂ ಸಂಪುಟದಲ್ಲಿ ಮಹಿಳೆಯರಿಗೆ ಸ್ಥಾನ ಕೊಡದೆ ಅಪಮಾನ ಮಾಡಿದೆ ಎಂದು ದೂರಿದರು.

ಮಹಿಳಾ ಸಚಿವರಿಲ್ಲದೆ ಅಧಿವೇಶನ ನಡೆಯುತ್ತಿರುವುದು ಇದೇ ಮೊದಲು. ಇದನ್ನು ಬಿಜೆಪಿ ಖಂಡಿಸುತ್ತದೆ. ತಾಯಂದಿರಿಗೆ ಕಾಂಗ್ರೆಸ್ ಅಪಮಾನ ಮಾಡಿದೆ ಎಂದು ಟೀಕಿಸಿದರು.

ಇದೇ ಸಂದರ್ಭದಲ್ಲಿ ಮಾತನಾಡಿದ ಮಾಜಿ ಸಚಿವೆ, ಬಿಜೆಪಿ ಶಾಸಕಿ ಶಶಿಕಲಾ ಜೊಲ್ಲೆ ಅವರು, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಸಂಪುಟದಲ್ಲಿ ಮಹಿಳೆಯರಿಗೆ ಸ್ಥಾನ ಕೊಡದೆ ಅವಮಾನ ಮಾಡಿದ್ದಾರೆ. ಕಾಂಗ್ರೆಸ್‌ನ ಧೋರಣೆಯನ್ನು ಖಂಡಿಸುತ್ತೇವೆ. ಕಾಂಗ್ರೆಸ್‌ನ ಈ ಮಹಿಳಾ ವಿರೋಧಿ ಧೋರಣೆಗೆ ಮಹಿಳೆಯರು ತಕ್ಕ ಉತ್ತರ ನೀಡುತ್ತಾರೆ ಎಂದು ಹೇಳಿದರು. ಸಂಸತ್‌ನಲ್ಲೂ ಮಹಿಳಾ ಮೀಸಲು ಮಸೂದೆಗೆ ಕಾಂಗ್ರೆಸ್ ವಿರೋಧ ವ್ಯಕ್ತ ಮಾಡಿತ್ತು. ಕಾಂಗ್ರೆಸ್ ಮಹಿಳೆಯರಿಗೆ ಯಾವ ರೀತಿ ಗೌರವ ಕೊಡುತ್ತದೆ ಎಂಬುದು ಇದರಿಂದ ಗೊತ್ತಾಗುತ್ತದೆ ಎಂದು ಶಶಿಕಲಾ ಜೊಲ್ಲೆ ತಿಳಿಸಿದರು.

ಬಿಜೆಪಿಯ ಮತ್ತೊಬ್ಬ ಮಹಿಳಾ ಶಾಸಕಿ ಮಂಜುಳಾ ಲಿಂಬಾವಳಿ ಅವರು ಮಾತನಾಡಿ, ಸಂಪುಟದಲ್ಲಿ ಮಹಿಳೆಯರಿಗೆ ಸ್ಥಾನ ನೀಡಿಲ್ಲ. ಇಷ್ಟು ದಿನ ಒಬ್ಬಮಹಿಳೆ ಸಚಿವೆಯಾಗಿದ್ದರು ಈಗ ಅದೂ ಇಲ್ಲ. ಇದು ಮಹಿಳೆಯರಿಗೆ ಆಗಿರುವ ಅಪಮಾನ. ಮುಂದೆ ಈ ಬಗ್ಗೆ ಉಗ್ರ ಹೋರಾಟ ಮಾಡುತ್ತೇವೆ ಎಂದು ಹೇಳಿದರು. ಸಂಪುಟದಲ್ಲಿ ಕಾಂಗ್ರೆಸ್ ಪಕ್ಷ ಮಹಿಳೆಯರಿಗೆ ಪ್ರಾತಿನಿಧ್ಯ ನೀಡದೆ ಮಾತೆಯರಿಗೆ ಅವಮಾನ ಮಾಡಿದೆ. ಕಾಂಗ್ರೆಸ್ ಪಕ್ಷಕ್ಕೆ ಧಿಕ್ಕಾರ ಎಂದು ಶಾಸಕಿ ಭಾಗೀರತಿ ಮುರುಳ್ಯ ಹೇಳಿದರು.

## ಸಭಾಧ್ಯಕ್ಷ-ಸಭಾಪತಿ ಆಯ್ಕೆ

ನೈಜ್ಯ ದೇಸೆ ನ್ಯೂಸ್

**ಬೆಂಗಳೂರು: ವಿಧಾನಸಭೆಯ ನೂತನ ಸಭಾಧ್ಯಕ್ಷರಾಗಿ ಗುರುಪಾದ ಗೌಡ ಸಂಗನಗೌಡ ಪಾಟೀಲ (ಜಿ.ಎಸ್. ಪಾಟೀಲ್) ಹಾಗೂ ವಿಧಾನ ಪರಿಷತ್ತಿನ ಸಭಾಪತಿಯಾಗಿ ಸಲೀಂ ಅಹ್ಮದ್ ಅವರನ್ನು ಆಯ್ಕೆ ಮಾಡಲಾಯಿತು.**



ವಿಧಾನಸಭೆಯಲ್ಲಿಂದು ನೂತನ ಸಭಾಧ್ಯಕ್ಷರ ಆಯ್ಕೆ ಪ್ರಕ್ರಿಯೆಯನ್ನು ಬಿಜೆಪಿ-ಜೆಡಿಎಸ್ ಪಕ್ಷಗಳು ಬಹಿಷ್ಕ-ರಿಸಿದ್ದವು. ವಿಪಕ್ಷಗಳ ಬಹಿಷ್ಕಾರದ ನಡುವೆಯೇ ಗದಗ ಜಿಲ್ಲೆಯ ರೋಣಾ ಶಾಸಕರಾದ ಜಿ.ಎಸ್. ಪಾಟೀಲ್ ಅವರನ್ನು ವಿಧಾನಸಭೆಯನ್ನು ನೂತನ ಸಭಾಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಯಿತು. ವಿಧಾನಸಭೆಯಲ್ಲಿಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ರವರು ನೂತನ ಸಚಿವರನ್ನು ಸದನಕ್ಕೆ ಪರಿಚಯಿಸಿದ ಕಲಾಪ ಪೂರ್ಣಗೊಂಡ ನಂತರ ಹಂಗಾಮಿ ಸಭಾಧ್ಯಕ್ಷ ಟಿ.ಬಿ. ಜಯಚಂದ್ರ ಅವರು ನೂತನ ಸಭಾಧ್ಯಕ್ಷರ ಆಯ್ಕೆ ಪ್ರಸ್ತಾವವನ್ನು ಮಂಡಿಸುವಂತೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ರವರಿಗೆ ಸೂಚಿಸಿದರು. ಅದರಂತೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ರವರು ಗುರುಪಾದಗೌಡ ಸಂಗನಗೌಡ ಪಾಟೀಲ

4ನೇ ಪುಟಕ್ಕೆ

## ಅಂಜುಮನ್-ಎ-ಮುಸ್ಲಿಮೀನ್ ಆನೆಹೊಸೂರು ಗ್ರಾಮ ಕಮಿಟಿ ನೂತನ ಪದಾಧಿಕಾರಿಗಳ ಆಯ್ಕೆ

ನೈಜ್ಯ ದೇಸೆ ನ್ಯೂಸ್

**ಲಿಂಗಸಗೂರು: ಅಂಜುಮನ್-ಎ-ಮುಸ್ಲಿಮೀನ್ ಲಿಂಗಸೂಗೂರ ತಾಲೂಕು ಕಮಿಟಿ(ರಿ) ವತಿಯಿಂದ ದಿನಾಂಕ 10/08/2026 ರಂದು ಆನೆಹೊಸೂರು ಗ್ರಾಮದ ಜಾಮಿಯಾ ಮಸೀದಿಯಲ್ಲಿ ನಡೆದ ಸಭೆಯಲ್ಲಿ ಅಂಜುಮನ್-ಎ-ಮುಸ್ಲಿಮೀನ್ ಆನೆಹೊಸೂರು ಗ್ರಾಮದ ಕಮಿಟಿಯ ಗೌರವ ಅಧ್ಯಕ್ಷರಾಗಿ ದಾವಲ್ ಸಾಬ್ ಪಟಾನ್,**

ಅಧ್ಯಕ್ಷರಾಗಿ ರಬ್ಬಾನಿ ಸಾಬ್ ಜಾಗೀರ್ ದಾರ್, ಉಪಾಧ್ಯಕ್ಷರಾಗಿ ಖಾದರ್ ಸಾಬ್ ಬಾವಿನಮನಿ, ಇನ್ನೋರ್ವ ಉಪಾಧ್ಯಕ್ಷರಾಗಿ ಯಾಸಿನ್ ಆರ್ ಕರಡಿ, ಪ್ರಧಾನ ಕಾರ್ಯದರ್ಶಿಯಾಗಿ ಶಹಾಜನ್ ಆರ್ ಬೆಂಡೋಣಿ, ಜಂಟಿ ಕಾರ್ಯದರ್ಶಿಯಾಗಿ ಹುಸೇನ್ ಸಾಬ್ ಡೋಣಗತ್ತಲ, ಕಾರ್ಯಾಧ್ಯಕ್ಷರಾಗಿ ಮಹೇಬೂಬ್ ಸರಕಾರಿ ಖಜಾಂಚಿಯಾಗಿ ಬುಡ್ಡಾಸಾಬ್ ಹುಡೇದ್, ಇನ್ನೋರ್ವ ಖಜಾಂಚಿ-



ಯಾಗಿ ಹಸನ್ ಸಾಬ್ ಕೋಳೂರು ಸದಸ್ಯರಾಗಿ ಶಬ್ಬೀರ್ ಗಿರಣಿ, ರಸೂಲ್ ಹವಾಲ್ದಾರ್, ಹಸನ್ ಸಾಬ್ ನಾಲತವಾಡ, ಶರೀಫ್ ಡೋಣಗತ್ತಲ , ನಜೀರ್ ಮಾಲಾದರ್, ಸುಭಾನ್ ಸಾಬ್, ದಸ್ತಗೀರಸಾಬ್ ಬಳಗಾನೂರು, ಮೈಬುಬ್ ಸಾಬ್ ಚಾಮಲಾಪುರ್, ರಿಯಾಜ್ ಖಾಜಿ, ರಫಿ ತೋಟದ್, ಅಮೀರ್ ಭಗವಾನ್, ಹಸನ್ ಖುರೇಶಿ, ರಜ್ಜಬಅಲಿ ಸರಕಾರಿ, ಚಾಂದಪಾಷಾ ಹೋಟೆಲ್, ಮೋದಿನಸಾಬ್ ಕಿರಾಣಿ ಅಂಗಡಿ, ರಸೂಲ್ ಹುಡೇದ್, ಜಾವೀದ್ ಸರಕಾರಿ, ಯೂಸುಫ್ ಉಸ್ತಾದ್, ಜಾಫರ್ ಟೈಲರ್, ಅಶ್ರಫ್ ಕಿಲೇದಾರ್, ಮಹೇಬುಬ್ ಬೆಂಡೋಣಿ, ಚಾಂದ್ ಪಾಷಾ ಕಂಬಾರ, ರುಕುಮುದ್ದಿನ್ ಹೈದರಾಬಾದ್, ರಾಜಸಾಬ್ ಸರಕಾರಿ, ಹುಸೇನ್ ಸಾಬ್ ಹುಡೇದ್, ಬಡೆಸಾಬ್ ಹುಡೇದ್, ಮೋದಿನ್ ಸಾಬ್ ಅಗಸಿಮನಿ, ಮೈನುದ್ದಿನ್ ಭಗವಾನ್, ಅಲಿ ಚಿತ್ತಾಪುರ, ಅಬ್ದುಲ್ ಸಾಬಣ್ಣನವರ, ರಸೂಲ್ ಹೈದರಾಬಾದ್, ಲಾಳೆಮಶಾಕ್ ನಾಲತವಾಡ, ಅಮೀನ್ ಸಾಬ್ ಕರಡಿ ಹಾಗೂ ಅಂಜುಮನ್ ಲಿಂಗಸೂಗೂರ ತಾಲೂಕು ಕಾರ್ಯಕಾರಿ ಸಮಿತಿ ಸದಸ್ಯರಾಗಿ ಖಾಸಿಂಸಾಬ್ ಹುಡೇದ್, ರಾಜಸಾಬ್ ಕರಡಿ, ಮಹಮ್ಮದ್ ರಸೂಲ್ ಸರಕಾರಿ, ಆದಿಲ್ ಸಾಬ್ ಜಾಗೀರದಾರ್, ಬಂದೇನವಾಜ್ ಕೋಳೂರು, ಮೈಬುಸಾಬ್ ನಾಲತವಾಡ, ನಬಿಸಾಬ್ ಗುರಿಕಾರ, ಹುಸೇನ್ ಸಾಬ್ ಕರ್ನಾಚಿ, ನಜೀರ್ ಸಾಬ್ ಟೈಲರ್ ಹಾಗೂ ಷಹಜಹಾನ್ ಬೆಂಡೋಣಿ ಇವರನ್ನ ಆನೆಹೊಸೂರು ಗ್ರಾಮದ ಸಮುದಾಯದವರ ಒಮ್ಮತದ ಅಭಿಪ್ರಾಯದ ಮೇರೆಗೆ ಆಯ್ಕೆ ಮಾಡಲಾಯಿತು..

## ಆರೋಗ್ಯ ಇಲಾಖೆ ಕಾರ್ಯದರ್ಶಿಗೆ ಸಿಎಂ ಕ್ಲಾಸ್: ಗುಟ್ಕಾ ನಿಷೇಧ ಆದೇಶ ಶೀಘ್ರದಲ್ಲೇ ಹಿಂಪಡೆಯಲು ಸೂಚನೆ

ನೈಜ್ಯ ದೇಸೆ ನ್ಯೂಸ್

**ಬೆಂಗಳೂರು: ಕರ್ನಾಟಕದಲ್ಲಿ ಗುಟ್ಕಾ ಮಾರಾಟ ನಿಷೇಧಕ್ಕೆ ಸಂಬಂಧಿಸಿದ ಆದೇಶವನ್ನು ವಾಪಸ್ ಪಡೆಯುವಂತೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೂಚನೆ ನೀಡಿದ್ದಾರೆ.**

ಗುಟ್ಕಾ ನಿಷೇಧ ಆದೇಶದ ಕುರಿತು ಬಹುತೇಕ ಶಾಸಕರಿಂದ, ಅದರಲ್ಲಿಯೂ ಬಿಜೆಪಿ, ಜೆಡಿ-ಎಸ್ ಹಾಗೂ ಕಾಂಗ್ರೆಸ್ ಶಾಸಕರಿಂದ ತೀವ್ರ ವಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ. ಈ ಕುರಿತು ಚರ್ಚಿಸಲು ಹಿರಿಯ ಶಾಸಕರು ನಿನ್ನೆ ಸಿಎಂ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿ



ಮಾಡಿ ಮನವಿ ಸಲ್ಲಿಸಿದ್ದರು. ಆದೇಶದ ಬಗ್ಗೆ ತಮಗೆ ಮಾಹಿತಿ ಇರಲಿಲ್ಲ ಎಂದು ಈ ವೇಳೆ ಸಿಎಂ ಸ್ಪಷ್ಟಪಡಿಸಿದ್ದರು. ಬಳಿಕ ನಡೆದ ಸಂಪುಟ ಸಭೆಯಲ್ಲೂ ಈ ವಿಚಾರ ಪ್ರಸ್ತಾಪವಾಗಿದೆ.

ಆರೋಗ್ಯ ಇಲಾಖೆ ಕಾರ್ಯದರ್ಶಿಯನ್ನು ತರಾಟೆಗೆ ತೆಗೆದುಕೊಂಡ ಸಿಎಂ ಡಿ.ಕೆ. ಶಿವಕುಮಾರ್, ತಮ್ಮ ಗಮನಕ್ಕೆ ತರದೇ ಇಂತಹ ಗಂಭೀರ ಆದೇಶವನ್ನು ಹೇಗೆ ಹೊರಡಿಸಲಾಗಿದೆ ಎಂದು ಪ್ರಶ್ನಿಸಿದ್ದಾರೆ. ಸುಮಾರು ಏಳೆಂಟು ಜಿಲ್ಲೆಯ ಅಡಿಕೆ ಬೆಳೆಗಾರರ ಮೇಲೆ ಈ ನಿರ್ಧಾರ ಪರಿಣಾಮ ಬೀರುತ್ತದೆ ಎಂದು ಸಿಎಂ ತಿಳಿಸಿದ್ದಾರೆ. ಹೀಗಾಗಿ, ಗುಟ್ಕಾ ನಿಷೇಧ ಆದೇಶವನ್ನು ಶೀಘ್ರದಲ್ಲೇ ಹಿಂಪಡೆಯುವಂತೆ ಸೂಚನೆ ನೀಡಲಾಗಿದೆ. ಈ ಆದೇಶ ಇಂದೋ ಅಥವಾ ನಾಳೆಯೋ ಹೊರಬೀಳುವ ಸಾಧ್ಯತೆಯಿದೆ.

## ಕಡೇಕೊಪ್ಪದಲ್ಲಿ ವಿಬಿ-ಜಿಆರ್‌ಎಎಂ ಕಾಯ್ದೆ ಕುರಿತು ಜಾಗೃತಿ

ನೈಜ್ಯ ದೇಸೆ ನ್ಯೂಸ್

**ಕುಷ್ಟಗಿ: ತಾಲೂಕಿನ ಕಡೇಕೊಪ್ಪ ಗ್ರಾಮದ ಮಿಯ್ಯಾಪುರ ಕೆರೆಯಲ್ಲಿ ವಿಬಿ-ಜಿಆರ್‌ಎಎಂ (VB-G RAM G) ಕಾಯ್ದೆಯಡಿ ಗ್ರಾಮೀಣ ಕುಟುಂಬಗಳಿಗೆ ಉದ್ಯೋಗದ ದಿನಗಳನ್ನು 100ರಿಂದ 125 ದಿನಗಳಿಗೆ ಹೆಚ್ಚಿಸಿರುವ ಹೊಸ ಯೋಜನೆಯ ಕುರಿತು ಜಾಗೃತಿ ಕಾರ್ಯಕ್ರಮ ನಡೆಯಿತು.**

ಈ ಸಂದರ್ಭದಲ್ಲಿ ಸಂಜೀವಿನಿ ಯೋಜನೆಯ ಶ್ರೀ ಸುಕಖುಮನಿ ಸ್ವಾಮಿ ಉಕಟಈ ಸಿಬ್ಬಂದಿ ಕವಿತಾ ಹಿರೇಮಠ ಮಾತನಾಡಿ, ಸಂಜೀವಿನಿ ಯೋಜನೆಯಡಿ ಹೊಸ ಸಂಘಗಳ ರಚನೆ, ಸಂಘಗಳಿಗೆ



ದೊರೆಯುವ ಸೌಲಭ್ಯಗಳು ಹಾಗೂ ಯುವಕ-ಯುವತಿಯರಿಗೆ ನೀಡಲಾಗುವ ವಿವಿಧ ತರಬೇತಿಗಳ ಕುರಿತು ಮಾಹಿತಿ ನೀಡಿದರು.

ಗಂಡು ಮತ್ತು ಹೆಣ್ಣು ಮಕ್ಕಳ ನಡುವೆ ಯಾವುದೇ ರೀತಿಯ ಭೇದಭಾವ ಇರಬಾರದು. ಇಬ್ಬರಿಗೂ ಸಮಾನ ಹಕ್ಕು, ಅವಕಾಶ ಹಾಗೂ ಗೌರವ ದೊರೆಯಬೇಕು ಎಂದು ಅವರು ಹೇಳಿದರು. ಸಾಮಾಜಿಕ ರಚನೆ, ಲಿಂಗತ್ವ, ಹದಿಹರೆಯದವರ ಯೋಗಕ್ಷೇಮ ಮತ್ತು ಆರೋಗ್ಯ, ಲಿಂಗ ದೌರ್ಜನ್ಯ, ಲಿಂಗ ಸಮಾನತೆ, ಮಹಿಳಾ ಶಿಕ್ಷಣ ಹಾಗೂ ಮಹಿಳೆಯರಿಗೆ ಸಂಬಂಧಿಸಿದ ಕಾನೂನುಗಳ ಕುರಿತು ಅರಿವು ಮೂಡಿಸಿದರು. ಯುವಕ-ಯುವತಿಯರು ಹಾಗೂ ಮಹಿಳೆಯರು ಸರ್ಕಾರದ ವಿವಿಧ ಯೋಜನೆಗಳ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಂಡು ಸ್ವಾವಲಂಬಿಗಳಾಗಬೇಕು ಎಂದು ಕವಿತಾ ಹಿರೇಮಠ ಕರೆ ನೀಡಿದರು.

## ಹನಮಸಾಗರದ 25 ಅಲೆಮಾರಿ ಕುಟುಂಬಗಳಿಗೆ ನಿವೇಶನ, ಭೂಮಿ ಮಂಜೂರಾತಿಗೆ ಆಗ್ರಹ

ನೈಜ್ಯ ದೇಸೆ ನ್ಯೂಸ್

**ಕುಷ್ಟಗಿ: ಪಟ್ಟಣದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪುತ್ಥಳಿ ಸಮೀಪ ಪ್ರಜ್ಞಾವಂತ ಪ್ರಗತಿಪರ ಪ್ರಜಾಪ್ರಭುಗಳ ಹೋರಾಟ ವೇದಿಕೆ ವತಿಯಿಂದ ಹನಮಸಾಗರದ ಅಲೆಮಾರಿ, ಅರೆ ಅಲೆಮಾರಿ ಹಾಗೂ ಸೂಕ್ಷ್ಮ ಮತ್ತು ಅತಿ ಸೂಕ್ಷ್ಮ ಸಮುದಾಯದ ಸುಮಾರು 25 ನಿರ್ಗತಿಕ ಕುಟುಂಬಗಳಿಗೆ ನಿವೇಶನ, ಭೂಮಿ ಮಂಜೂರು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಮನವಿ ಸಲ್ಲಿಸಲಾಯಿತು.**

ಈ ಸಂದರ್ಭದಲ್ಲಿ ವೇದಿಕೆಯ ಮುಖಂಡ ಬಸವರಾಜ ಗಾಣಿಗಾರ ಮಾತನಾಡಿ, ಹನಮಸಾಗರದಲ್ಲಿ ಅಲೆಮಾರಿ ಹಾಗೂ ಅರೆ ಅಲೆಮಾರಿ ಸಮುದಾಯದ ಸುಮಾರು 25 ಕುಟುಂಬಗಳು ವಾಸಿಸಲು ಸೂರು ಇಲ್ಲದೆ ಅಲ್ಲಲ್ಲಿ ಜೋಪಡಿ ಹಾಕಿಕೊಂಡು ಜೀವನ ನಡೆಸುತ್ತಿದ್ದಾರೆ. ಈ ಕುಟುಂಬಗಳಿಗೆ ನಿವೇಶನ, ವಸತಿ ಹಾಗೂ ಅಗತ್ಯ ಮೂಲಸೌಕರ್ಯಗಳನ್ನು ಕಲ್ಪಿಸಬೇಕು ಎಂದು ಒತ್ತಾಯಿಸಿದರು. ಕಲ್ಯಾಣ ಕರ್ನಾಟಕದ ಸಮಗ್ರ ಅಭಿವೃದ್ಧಿಗೆ




ದೃಢ ಸಂಕಲ್ಪದೊಂದಿಗೆ ಕಕ ಭಾಗದ ಏಳು ಜಿಲ್ಲೆಗಳ ಜಲ ಹಾಗೂ ಜಟಿಲ ಸಮಸ್ಯೆಗಳ ಕುರಿತು ಬೃಹತ್ ನಿರಂತರ ಹೋರಾಟ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು. ಆ.15ರಂದು 80ನೇ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಪಟ್ಟಣದ ಹಿರಿಯ ಸ್ವಾತಂತ್ರ್ಯ ಹೋರಾಟಗಾರರ ಕುಟುಂಬದವರಿಗೆ ಸನ್ಮಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಸ್ವಾತಂತ್ರ್ಯ ಹೋರಾಟಗಾರರ ಛದ್ಮವೇಷಧಾರಿಗಳ ಮೆರವಣಿಗೆ ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ನಡೆಯಲಿದ್ದು, ನಂತರ ತಾಲೂಕು ಕ್ರೀಡಾಂಗಣದಲ್ಲಿ ನಡೆಯುವ ಸಾರ್ವಜನಿಕ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಾಗುವುದು ಎಂದರು. ಈ ಸಂದರ್ಭದಲ್ಲಿ ಚಂದ್ರಕಾಂತ ನಾಲಗಾರ, ದೇವರಾಜ ಹಜಾಳ, ಕಾಶಿಂ ಶ್ರೀಶೈಲ, ಭೀಮಾಶಂಕರ್, ಕಿರಣ ಜ್ಯೋತಿ, ಅಲೆಮಾರಿ ಸಮುದಾಯದ ರಾಮಗಿರಿಯಪ್ಪ, ರಾಮಣ್ಣ, ದುಗರಗಪ್ಪ, ಶಾಂತಪ್ಪ, ಹುಸೇನಪ್ಪ, ಚನ್ನಮ್ಮ, ಸಾಲಮ್ಮ, ಶಾಂತಮ್ಮ, ಲಲಿತಮ್ಮ, ಹನಮವ್ವ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಕುಷ್ಟಗಿಯಲ್ಲಿ ಬಿಜೆಪಿ ಯುವಮೋರ್ಚಾದಿಂದ ಭವ್ಯ ತ್ರಿವರ್ಣ ಬೈಕ್ ಯಾಲಿ

ನೈಜ್ಯ ದೇಸೆ ನ್ಯೂಸ್

**ಕುಷ್ಟಗಿ: 80ನೇ ಸ್ವಾತಂತ್ರ್ಯೋತ್ಸವದ ಸಂಭ್ರಮ ಹಾಗೂ 'ವಂದೇ ಮಾತರಂ' 150ನೇ ವರ್ಷದ ಆಚರಣೆಯ ಅಂಗವಾಗಿ ಬಿಜೆಪಿ ಯುವಮೋರ್ಚಾ ವತಿಯಿಂದ ಶುಕ್ರವಾರ ಕುಷ್ಟಗಿ ನಗರದಲ್ಲಿ ಭವ್ಯ ತ್ರಿವರ್ಣ ಬೈಕ್ ಯಾಲಿ ನಡೆಯಿತು.**

ಪಟ್ಟಣದ ಮಲ್ಲಯ್ಯ ವೃತ್ತದಿಂದ ಆರಂಭಗೊಂಡ ಯಾಲಿಯು ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿತು. ತ್ರಿವರ್ಣ ಧ್ವಜಗಳನ್ನು ಹಿಡಿದು, ಭಾರತ ಮಾತೆಯ ಜಯಘೋಷಗಳೊಂದಿಗೆ ಸಾಗಿದ ಯಾಲಿ ಕುಷ್ಟಗಿಯ ಯುವಶಕ್ತಿಯ ರಾಷ್ಟ್ರಪ್ರೇಮಕ್ಕೆ ಸಾಕ್ಷಿಯಾಯಿತು. ಯಾಲಿಯುದ್ದಕ್ಕೂ ದೇಶಭಕ್ತಿ ಘೋಷಣೆಗಳು ಮೊಳಗಿದವು.

ಈ ಸಂದರ್ಭದಲ್ಲಿ ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಕೆ. ಮಹೇಶ, ಮಂಡಲ ಅಧ್ಯಕ್ಷ ಮಹಾಂತೇಶ ಬಾದಾಮಿ, ತಾಲೂಕು ಯುವ ಘಟಕದ ಅಧ್ಯಕ್ಷ ಉಮೇಶ ಯಾದವ ಬಾಲಪ್ಪ ಉಂಡಿ



ಶೈಲಜಾ ಬಾಗಲಿ ಜಿಲ್ಲಾ ಯುವಮೋರ್ಚಾ ಪ್ರಧಾನ ಕಾರ್ಯದರ್ಶಿ ದೊಡ್ಡಬಸವ ಸುಂಕದ, ಜಿಲ್ಲಾ ಯುವಮೋರ್ಚಾ ಉಪಾಧ್ಯಕ್ಷ ಪುಂಡಲೀಕ ಬಿ. ಜುಲಕುಂಟಿ, ಕೊರಡಕೇರ ಮುಖಂಡ ರವಿಕುಮಾರ್ ಹಿರೇಮಠ, ಪ್ರಭುಶಂಕರಗೌಡ್ರ, ದುರಗಪ್ಪ ವಡ್ಡಿಗೇರಿ, ಮನು ಹಳೇಗೌಡ್ರ, ಲಕ್ಷ್ಮಣ ಕಟ್ಟಿಹೊಲ, ಮರಸಣ್ಣ ತಾಳದ ಸೇ-ರಿದಂತೆ ಯುವಮೋರ್ಚಾ ಪದಾಧಿಕಾ-ರಿಗಳು ಹಾಗೂ ಅಪಾರ ಸಂಖ್ಯೆಯ ದೇಶಭಕ್ತರು ಭಾಗವಹಿಸಿದ್ದರು. ಸ್ವಾತಂತ್ರ್ಯೋತ್ಸವದ ಹಿನ್ನೆಲೆಯಲ್ಲಿ ನಡೆದ ಈ ಬೈಕ್ ಯಾಲಿ ಪಟ್ಟಣದಲ್ಲಿ ದೇಶಭಕ್ತಿ ಹಾಗೂ ರಾಷ್ಟ್ರಾಭಿಮಾನದ ವಾತಾವರಣ ಮೂಡಿಸಿತು.

## ಸಾಹಿತ್ಯ ಸಿಂಚನ

### ನಗುವಿನ ಲೋಕ

ನಗುವಿನ ಲೋಕವಿದು, ನಲಿವಿನ ಸಾಗರವಿದು,
ಮನದ ನೋವಿಗೆ ಮರೆವಿನ ಮಂತ್ರವಿದು.
ಮುಗ್ಧ ನಗುವೊಂದು ಹೃದಯ ಗೆಲ್ಲುವುದು,
ಕತ್ತಲ ಬದುಕಿಗೆ ಬೆಳಕು ನೀಡುವುದು.

ಹೂವಿನ ದಳದಂತೆ ನಗು ಅರಳಲಿ,
ಸಿಹಿಯಾದ ಮಾತು ಮನ ತಣಿಸಲಿ.
ಸಂತಸದ ಕ್ಷಣಗಳು ಜೊತೆ ಸಾಗಲಿ,
ಬದುಕಿನ ಪಯಣವು ಸುಂದರವಾಗಲಿ.

ನಗುತಿದ್ದರೆ ಸ್ನೇಹವು ಗಟ್ಟಿಯಾಗುವುದು,
ನಲಿಯುತ್ತಿದ್ದರೆ ಮನವು ಹಗುರಾಗುವುದು.
ಒಂದು ನಗು ಸಾಕು ನೋವು ಮರೆಸಲು,
ಒಂದು ನಗು ಸಾಕು ಪ್ರೀತಿ ಬೆಳೆಸಲು.

ನಗುವಿನ ಹಿಂದೆ ಸಾವಿರ ಭಾವನೆ,
ನಗುವಿನೊಳಗೆ ಅಡಗಿದೆ ಜೀವನೆ.
ನಗುವನ್ನು ಹಂಚಿದಷ್ಟು ಸಂತಸ ಹೆಚ್ಚುವುದು,
ಪ್ರೀತಿಯ ಲೋಕವು ಇನ್ನಷ್ಟು
ಸುಂದರವಾಗುವುದು.

ಬಿರುಗಾಳಿ ಬಂದರೂ ನಗು ಮಾಯವಾಗದಿರಲಿ,
ಕಷ್ಟದ ದಾರಿಯಲ್ಲೂ ಧೈರ್ಯ
ಕಡಿಮೆಯಾಗದಿರಲಿ.
ನಗು ನಮ್ಮ ಬದುಕಿನ ಅಮೂಲ್ಯ ಆಭರಣ,
ನಲಿವು ನಮ್ಮ ಹೃದಯದ ಶಾಶ್ವತ ಸಂಪದ್ಧನ.

ನಗುವಿನ ಲೋಕದಲ್ಲಿ ಎಲ್ಲರೂ ಒಂದಾಗೋಣ,
ಸಂತಸದ ಗೀತೆಯನ್ನು ಹಾಡುತ್ತಾ ಸಾಗೋಣ.
ನಗುತ ನಗುತ ಬದುಕನ್ನು ಪ್ರೀತಿಸೋಣ,
ಪ್ರತಿ ದಿನವನ್ನೂ ಹಬ್ಬದಂತೆ ಆಚರಿಸೋಣ

# ನಿನ್ನ ಏಳ್ಗೆಗೆ ನೀನೆ ಶಿಲ್ಪಿ – ಜಗನ್ನಾಥ

**ನೈಜ್ಯ ದೆಸೆ ನ್ಯೂಸ್**

ಇಂದಿನ ಮಕ್ಕಳು ನಾಳೆಯ ಭಾರತದ ಭವಿಷ್ಯ ನಿಮ್ಮಲ್ಲಿ ಕಲಿಕೆಯ ಜೊತೆ ಜೊತೆಯಾಗಿ ಜೀವನದ ಕೌಶಲ್ಯಗಳು ಬೆಳಿಬೇಕಿದೆ. ಅತ್ಯುತ್ತಮ ಸಮಾಜ ರೂಪಿಸುವಲ್ಲಿ ನಿಮ್ಮ ಪಾತ್ರ ಕೂಡ ಮುಖ್ಯ ನಮ್ಮ ಸಂಸ್ಥೆಯ ಲಾಭಾಂಶವನ್ನು ಶೇಕಡವಾರುಗಳಲ್ಲಿ ಸಮಸಮಾಜ ನಿರ್ಮಿಸಲು ಸಮಾಜಮುಖಿ ಕಾರ್ಯಕ್ಕೆ ವಿನಿಯೋಗಿಸುತ್ತೇವೆ ಎಂದು ಸಂಸ್ಥೆಯ ನಿರ್ದೇಶಕ ಜಗನ್ನಾಥ ರಾಂಪೂರ್ ಉದ್ಘಾಟನಾ ನುಡಿಯಲ್ಲಿ ಹೇಳಿದರು.

ಕಾವೇರಿರಂಗ ಪತ್ತಿನ ಸಹಕಾರಿ ಸಂಘ ನಿಯಮಿತ ಮತ್ತು ಸರ್ಕಾರಿ ಬಾಲಕೀಯರ ಪದವಿ ಪೂರ್ವ ಕಾಲೇಜು ಮಾನವಿ ಸಹಯೋಗದೊಂದಿಗೆ ಜೀವನ ಕೌಶಲ್ಯ ತರಬೇತಿ ಕಾರ್ಯಾಗಾರ ಹಮ್ಮಿಕೊಳ್ಳಲಾಯಿತು.



ಸಂಪನ್ಮೂಲ ವ್ಯಕ್ತಿ ಮಹಿಬೂಬ್ ಮದ್ಲಾಪುರ ತರಬೇತಿಯಲ್ಲಿ "ಹದಿಹರೆಯದ ಹಂತ ಅರ್ಡಲ್ಸ್ ಏಜ್ ನಲ್ಲಿ ನಾವು ನಮ್ಮ ನಿಖಲ ಗುರಿ ಅದರ ಪ್ರಮಾಣಿಕ ಪ್ರಯತ್ನ, ಕೌಶಲ್ಯಾದರಿದ ಬದುಕು, ಭಾವನೆಗಳನ್ನು ಹೇಗೆ ನಿರ್ವಾಹಣೆ ಮಾಡಬೇಕು, ಸಂಬಂಧಗಳ ಬಾಂಧವ್ಯ, ಸ್ನೇಹಿತರ ಜೊತೆ ವರ್ತನೆ, ಉತ್ತಮ ಹವ್ಯಾಸಗಳು, ಸಮಾಜಿಕ ಪಿಡುಗು–ರೋಗದಂತೆ ಆವರಿಸಿಕೊಂಡಿರುವ ಮೊಬೈಲ್ ಅಡಿಕ್ಷನ್ ಬಳಕೆ, ಗುರು ಹಿರಿಯರಿಗೆ ಗೌರವದ ಭಾವನೆ, ನಾಯಕತ್ವ, ಏಕಾಗ್ರತೆಯನ್ನು ಕಾಪಾಡಿಕೊಳ್ಳುವ ಹಂತಗಳು, ಓದು ಬರಹದ ಕ್ರಮಬದ್ಧತೆ ಬಗ್ಗೆ ಚಟುವಟಿಕೆ ಮತ್ತು ಪ್ರಯೋಗಿಕವಾಗಿ ಹೇಳಿದರು.

ಅಧ್ಯಕ್ಷತೆಯಲ್ಲಿ ಪ್ರಾಚಾರ್ಯರಾದ ನಾಗಮಲ್ಲೇಶ ಜಿ. ಮಾತನಾಡಿ ಅತ್ಯವಶ್ಯಕ ತರಬೇತಿ ಸಿಕ್ಕಿದೆ ಮಕ್ಕಳಲ್ಲಿ ಮಕ್ಕಳಿಗೆ ಇದರ ಅವಶ್ಯಕತೆ ಇತ್ತು ಆಂತರಿಕ ವ್ಯಕ್ತಿತ್ವ ವೃದ್ಧಿಸಿಕೊಳ್ಳುವುದರಲ್ಲಿ ಈ ತರಬೇತಿ ತುಂಬಾ ಉಪಯುಕ್ತವಾಗಿದೆ. ಈ ಹಂತದಲ್ಲಿ ಹಲವಾರ ಬದಲಾವಣೆ ಕಲಿಕೆ ಛಲದ ನಿರ್ಧಾರಗಳಲ್ಲಿ ನಿರ್ಣಾಯಿಸಲು ಪ್ರತಿಭೆ ಮುಖ್ಯವಾಹಿನಿಯಲ್ಲಿ ಹೊರಹಾಕಲು ಅನುಕೂಲವಾಗಿದೆ ಎಂದರು. ವೇದಿಕೆಯಲ್ಲಿ ಉಪಾಧ್ಯಕ್ಷ ಅರವಿಂದ ಬಾಸುತ್ಕರ್, ಉಪನ್ಯಾಸಕ ಅಯ್ಯಪ್ಪ ಮತ್ತು ವಿದ್ಯಾರ್ಥಿಗಳಿದ್ದರು.

# ನನ್ನ ಮನದಾಳದ ಮಾತು... ಯಾರಿಗೆ ಬಂತು, ಎಲ್ಲಿಗೆ ಬಂತು 80ರ ಸ್ವಾತಂತ್ರ್ಯ?

**ನೈಜ್ಯ ದೆಸೆ ನ್ಯೂಸ್**

**ನಾಳೆ ನಾವು ಭಾರತದ 80ನೇ ಸ್ವಾತಂತ್ರ್ಯೋತ್ಸವವನ್ನು ಹೆಮ್ಮೆಯಿಂದ ಆಚ–ರಿಸುತ್ತಿದ್ದೇವೆ. ಬ್ರಿಟಿಷರ ದಾಸ್ಯದಿಂದ ಮುಕ್ತವಾದ ಭಾರತದಲ್ಲಿ ಪ್ರತಿಯೊಬ್ಬ ನಾಗರಿಕನಿಗೂ ಸಮಾನ ಅವಕಾಶ, ಉತ್ತಮ ಶಿಕ್ಷಣ, ಆರೋಗ್ಯ, ಉದ್ಯೋಗ ಮತ್ತು ಗೌರವಯುತ ಜೀವನ ಸಿಗಬೇಕು ಎಂಬುದು ನಮ್ಮ ಸ್ವಾತಂತ್ರ್ಯ ಹೋರಾಟಗಾರರ ಕನಸಾಗಿತ್ತು. ನಮ್ಮ ಸಂವಿಧಾನವೂ ದೇಶದ ಪ್ರತಿಯೊಂದು ಭಾಗವೂ ಸಮಾನವಾಗಿ ಅಭಿವೃದ್ಧಿ ಹೊಂದಬೇಕು ಎಂಬ ಆಶಯವನ್ನು ಹೊಂದಿದೆ.**

ಆದರೆ ಇಂದು ನಾವು ನಮ್ಮನ್ನೇ ಪ್ರಶ್ನಿಸಿಕೊಳ್ಳಬೇಕಾದ ಸಮಯ ಬಂದಿದೆ ? ಆ ಸ್ವಾತಂತ್ರ್ಯದ ಫಲ ನಮ್ಮ ಉತ್ತರ ಕರ್ನಾಟಕಕ್ಕೆ ನಿಜವಾಗಿಯೂ ಎಷ್ಟು ತಲುಪಿದೆ? ಜಗತ್ತಿಗೆ




ಸಮಾನತೆಯ ಸಂದೇಶ ಸಾರಿದ ವಿಶ್ವಗುರು ಬಸವಣ್ಣನವರ ನಾಡು, ಸಾಮಾಜಿಕ ಜಾಗೃತಿಯ ಕಿಚ್ಚು ಹೊತ್ತಿಸಿದ ಸಂತ ಶಿಶುನಾಳ ಶರೀಫರ ನಾಡು ? ಇದೇ ನಮ್ಮ ಹೆಮ್ಮೆಯ ಕಲ್ಯಾಣ ಕರ್ನಾಟಕ. ಇಂತಹ ಮಹನೀಯರು ಹುಟ್ಟಿದ ನಾಡಿನ ಜನರು ಇಂದಿಗೂ ಮೂಲಭೂತ ಸೌಲಭ್ಯಗಳು ಮತ್ತು ಸಮರ್ಪಕ ಅಭಿವೃದ್ಧಿಗಾಗಿ ಹೋರಾಡಬೇಕಾದ ಪರಿಸ್ಥಿತಿ ನಿಜಕ್ಕೂ ನೋವಿನ ಸಂಗತಿ. ಇಂದು ಕಲ್ಯಾಣ ಕರ್ನಾಟಕ ಎಂಬ ಹೆಸರು ಇದ್ದರೂ, ಶಿಕ್ಷಣ, ಆರೋಗ್ಯ, ಉದ್ಯೋಗ, ಕೈಗಾರಿಕೆ, ನೀರಾವರಿ ಮತ್ತು ಮೂಲಸೌಕರ್ಯ ಕ್ಷೇತ್ರಗಳಲ್ಲಿ ನಮ್ಮ ಭಾಗ ಇನ್ನೂ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದೆ.

ಇದಕ್ಕೆ ಸ್ಪಷ್ಟ ಉದಾಹರಣೆಯೇ ರಾಯಚೂರು ಜಿಲ್ಲೆಯಲ್ಲಿ ೦ಋಖಏಖ ಸ್ಥಾಪನೆಗಾಗಿ ನಡೆಯುತ್ತಿರುವ ಹೋರಾಟ. AIIMSಗಾಗಿ ಹೋರಾಟ ಆರಂಭಿಸಿ 1,500 ದಿನಗಳನ್ನು ದಾಟಿದ್ದರೂ, ಇನ್ನೂ ನಿರ್ಧಾರಕ್ಕಾಗಿ ಕಾಯಬೇಕಾದ ಪರಿಸ್ಥಿತಿ ನಮ್ಮ ಭಾಗದ ಜನರ ನೋವನ್ನು ತೋರಿಸುತ್ತದೆ. ನಮ್ಮ ಹೋರಾಟ ಯಾರ ವಿರುದ್ಧವೂ ಅಲ್ಲ; ನಮ್ಮ ಹಕ್ಕಿಗಾಗಿ, ನಮ್ಮ ಮುಂದಿನ ಪೀಳಿಗೆಯ ಭವಿಷ್ಯಕ್ಕಾಗಿ. ಕಲ್ಯಾಣ ಕರ್ನಾಟಕ ಎಂಬ ಹೆಸರು ಫಲಕದಲ್ಲಿ ಮಾತ್ರವಲ್ಲ, ಜನರ ಬದುಕಿನಲ್ಲಿ ಕಾಣಿಸಿಕೊಳ್ಳಬೇಕು. ರಾಜ–ಕೀಯ ಭರವಸೆಗಳಿಗಿಂತ ಕಾರ್ಯರೂಪದ ಅಭಿವೃದ್ಧಿ ಬೇಕು. ಸ್ವಾತಂತ್ರ್ಯೋತ್ಸವವೆಂದರೆ ಕೇವಲ ಧ್ವಜಾರೋಹಣ ಮತ್ತು ಸಿಹಿ ಹಂಚಿಕೆಗೆ ಸೀಮಿತವಾಗಬಾರದು. ಸಮಾನ ಅಭಿವೃದ್ಧಿ ಸಿಗುವವರೆಗೂ ಪ್ರಶ್ನಿಸುವ ಹಕ್ಕು ಪ್ರತಿಯೊಬ್ಬ ನಾಗರಿಕನಿಗೂ ಇದೆ. ಯಾರಿಗೆ ಬಂತು, ಎಲ್ಲಿಗೆ ಬಂತು 80ರ ಸ್ವಾತಂತ್ರ್ಯ? ಜೈಹಿಂದ್!

## ರಾಮಸಾಗರದಲ್ಲಿ ಕುಷ್ಠ ರೋಗ ಅಂಗವಿಕಲರಿಗೆ ಕಿರಾಣಿ ಅಂಗಡಿ ನೆರವು: ಸ್ವಾವಲಂಬಿ ಬದುಕಿಗೆ ಆಸರೆ

**ನೈಜ್ಯ ದೆಸೆ ನ್ಯೂಸ್**

**ಬಳ್ಳಾರಿ / ಕಂಪ್ಲಿ : ತಾಲೂಕಿನ ರಾಮಸಾಗರ ಪ್ರಾಥ–ಮಿಕ ಆರೋಗ್ಯ ಕೇಂದ್ರದ ವ್ಯಾಪ್ತಿಯ ರಾಮಸಾಗರ ಗ್ರಾಮದಲ್ಲಿ ಇಂದು ಕುಷ್ಠ ರೋಗದಿಂದ ಅಂಗವಿಕಲತೆ ಹೊಂದಿರುವ ವ್ಯಕ್ತಿಗೆ ಜೀವನೋಪಾಯಕ್ಕಾಗಿ ಡೇಮಿಯನ್ ಫೌಂಡೇಶನ್ (ಆಈಖಖ) ವತಿಯಿಂದ ಕಿರಾಣಿ ಅಂಗಡಿಯ ಸಾಮಗ್ರಿಗಳನ್ನು ನೀಡಿ ನೆರವು ನೀಡಲಾಯಿತು.**



ತಾಲೂಕು ಆರೋಗ್ಯ ಅಧಿಕಾರಿಗಳಾದ ಡಾ. ಅರುಣ್ ಜಿ. ಅವರ ನೇತೃತ್ವದಲ್ಲಿ ಈ ಶ್ಲಾಘನೀಯ ಕಾರ್ಯಕ್ರಮ ನಡೆಯಿತು. ಸಂಕಷ್ಟದಲ್ಲಿರುವ ವ್ಯಕ್ತಿ ಯಾರ ಮೇಲೆಯೂ ಅವಲಂಬಿತರಾಗದೆ, ಸ್ವಂತ ಕಾಲಿನ ಮೇಲೆ ನಿಂತು ಗೌರವಯುತ ಬದುಕು ಸಾಗಿಸಲಿ ಎಂಬ ಉದ್ದೇಶದಿಂದ ಈ ಜೀವನೋಪಾಯದ ನೆರವನ್ನು ಒದಗಿಸಲಾಗಿದೆ. ಈ ಸಂದರ್ಭದಲ್ಲಿ ಡೇಮಿಯನ್ ಫೌಂಡೇಶನ್‌ನ ಅಧಿಕಾರಿ ಸುಧಾಕರ್, ಬಳ್ಳಾರಿ ಡಿ.ಎಲ್.ಒ (ಆಐಔ) ಕಚೇರಿಯ ಮೇಲ್ವಿಚಾರಕರಾದ ಪಂಚಾಕ್ಷರಿ, ಕಂಪ್ಲಿ ತಾಲೂಕಿನ ಆರೋಗ್ಯ ನಿರೀಕ್ಷಣಾಧಿಕಾರಿಗಳಾದ ಪಿ. ಬಸವರಾಜ ಹಾಗೂ ಫಲಾನುಭವಿಯ ಕುಟುಂಬದ ಸದಸ್ಯರು ಉಪಸ್ಥಿತರಿದ್ದರು. ಆರೋಗ್ಯ ಇಲಾಖೆ ಮತ್ತು ಡೇಮಿಯನ್ ಫೌಂಡೇಶನ್‌ನ ಈ ಜಂಟಿ ಮಾನವೀಯ ಕಾರ್ಯಕ್ಕೆ ಸಾರ್ವಜನಿಕ ವಲಯದಲ್ಲಿ ಭಾರಿ ಮೆಚ್ಚುಗೆ ವ್ಯಕ್ತವಾಗಿದೆ.

# ತಿರಂಗಾಯಾತ್ರೆ, 800 ವಿದ್ಯಾರ್ಥಿಗಳು ಭಾಗಿ

**ನೈಜ್ಯ ದೆಸೆ ನ್ಯೂಸ್**

**ಬಳ್ಳಾರಿ / ಕಂಪ್ಲಿ : ಬಳ್ಳಾರಿ: ವಂದೇ ಮಾತರಂ ಗೀತೆಗೆ 150 ವರ್ಷಗಳಾದ ಹಿನ್ನೆಲೆಯಲ್ಲಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಪಟ್ಟಣದಲ್ಲಿ 100 ಮೀಟರ್ ಉದ್ದದ ಬೃಹತ್ ತಿರಂಗಾ ಯಾತ್ರೆ ಹಮ್ಮಿಕೊಂಡಿತ್ತು.**

ಇಲ್ಲಿನ ಷಾಮಿಯ ಚಂದ್ ಬಾಲಕರ ಕಾಲೇಜ್ ದಿಂದ ಪ್ರಾರಂಭಗೊಂಡ ತಿರಂಗಾ ಯಾತ್ರೆಯು ನಾಲ್ಕನೇ ವಾರ್ಡ್, ನಡುವಲ್ ಮಸೀದಿ, ಮುಖ್ಯ ರಸ್ತೆಯ ಸಾಗುತ್ತಾ ಡಾ. ಬಿ.ಆರ್. ಅಂಬೇಡ್ಕರ್ ಸರ್ಕಲ್‌ವರೆಗೆ ನಡೆಯಿತು. 800ಕ್ಕೂ ಹೆಚ್ಚಿನ ವಿದ್ಯಾರ್ಥಿಗಳು ಹಾಗೂ ಯುವಕರು ಕೈಯಲ್ಲಿ ರಾಷ್ಟ್ರಧ್ವಜವನ್ನು ಹಿಡಿದು ಶಿಸ್ತುಬದ್ಧವಾಗಿ ಯಾತ್ರೆಯಲ್ಲಿ ಭಾಗವಹಿಸಿದ್ದರು. ಯಾತ್ರೆಯುದ್ದಕ್ಕೂ ಭಾರತ ಮಾತಾ ಕೀ ಜೈ, ವಂದೇ ಮಾತರಂ ಸೇರಿದಂತೆ



ದೇಶಭಕ್ತಿ ಘೋಷಣೆಗಳು ಮೊಳಗಿದವು. ಸುಮಾರು 100 ಮೀಟರ್ ಉದ್ದದ ರಾಷ್ಟ್ರಧ್ವಜ ಯಾತ್ರೆಯ ಪ್ರಮುಖ ಆಕರ್ಷಣೆಯಾಗಿದ್ದು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಲ್ಲಿ ದೇಶಭಕ್ತಿಯ ಭಾವನೆಯನ್ನು ಮೂಡಿಸಿತು. ಯಾತ್ರೆಯ ನೇತೃತ್ವ ವಹಿಸಿದ್ದ ಎಬಿವಿಪಿಯ ಬಳ್ಳಾರಿ ಜಿಲ್ಲಾ ಸಂಚಾಲಕರಾದ ಸಪ್ತಾಗಿರಿ ಮಂಚಕಂಠಿ ಮಾತನಾಡಿ, "ಭಾರತದ ರಾಷ್ಟ್ರಧ್ವಜ ಕೇವಲ ಒಂದು ಧ್ವಜವಲ್ಲ; ಅದು ನಮ್ಮ ದೇಶದ ಸ್ವಾಭಿಮಾನ, ಸಾರ್ವಭೌಮತ್ವ, ಏಕತೆ ಮತ್ತು ಅಖಂಡತೆಯ ಪ್ರತೀಕವಾಗಿದೆ. ತ್ರಿವರ್ಣ ಧ್ವಜವನ್ನು ಕೈಯಲ್ಲಿ ಹಿಡಿದು ಸಾಗುವುದು ಪ್ರತಿಯೊಬ್ಬ ಭಾರತೀಯನಿಗೂ ಹೆಮ್ಮೆಯ ಸಂಗತಿಯಾಗಿದೆ ಎಂದರು.

ಸ್ವಾತಂತ್ರ?ಯವನ್ನು ಕೇವಲ ಆಚ–ರಿಸುವುದಷ್ಟೇ ಅಲ್ಲದೆ, ದೇಶದ ಏಕತೆ ಮತ್ತು ಅಖಂಡತೆಯನ್ನು ಕಾಪಾಡುವ ಜವಾಬ್ದಾ–ರಿಯನ್ನೂ ಯುವಜನತೆ ಹೊತ್ತುಕೊಳ್ಳಬೇಕು. ವಿದ್ಯಾರ್ಥಿ ಜೀವನದಲ್ಲಿಯೇ ದೇಶದ ಬಗ್ಗೆ ಜವಾಬ್ದಾರಿ, ಸಾಮಾಜಿಕ ಕಾಳಜಿ ಮತ್ತು ರಾಷ್ಟ್ರಭಕ್ತಿಯ ಮನೋಭಾವ ಬೆಳೆಸಿಕೊಳ್ಳಬೇಕು ಹಾಗೂ ಭಾರತವು ವಿವಿಧ ಭಾಷೆ, ಸಂಸ್ಕೃತಿ, ಸಂಪ್ರದಾಯ ಮತ್ತು ಆಚರಣೆಗಳನ್ನು ಹೊಂದಿರುವ ವಿಶಾಲ ರಾಷ್ಟ್ರ. ಈ ವೈವಿಧ್ಯತೆಯ ನಡುವೆಯೂ ನಮ್ಮನ್ನು ಒಂದಾಗಿ ಬಂಧಿಸುವ ಶಕ್ತಿ ಭಾರತೀಯತೆಯಾಗಿದೆ ಎಂದು ಹೇಳಿದರು.

ಬಳ್ಳಾರಿ ಜಿಲ್ಲಾ ಸಂಘಟನಾ ಕಾರ್ಯದರ್ಶಿ ಟಿ. ಭರತ್, ವಿದ್ಯಾರ್ಥಿನಿ ವಿಸ್ತಾರಕಿ ವಿದ್ಯಾ, ಮುಖ್ಯ ವಕ್ತಾರ ಶಿವಾನಂದ ಹುಲಿಯನ್ನವರ, ಕಂಪ್ಲಿಯ ಎಬಿವಿಪಿಯ ಪದಾಧಿಕಾರಿಗಳು, ವಿದ್ಯಾರ್ಥಿಗಳು, ಸಾರ್ವಜನಿಕರು ಸೇ–ರಿದಂತೆ ಮತ್ತಿತರರು ಪಾಲ್ಗೊಂಡಿದ್ದರು. .

# ಸಚಿವ ಬಿ. ನಾಗೇಂದ್ರ ರಾಜೀನಾಮೆಗೆ ಬಿಜೆಪಿ ಪಟ್ಟು

**ನೈಜ್ಯ ದೆಸೆ ನ್ಯೂಸ್**

**ಬೆಂಗಳೂರು: ಸಚಿವ ಸಂಪುಟದಿಂದ ಬಿ. ನಾಗೇಂದ್ರ ಅವರನ್ನು ತಕ್ಷಣವೇ ಕೈಬಿಡಬೇಕೆಂದು ಒತ್ತಾಯಿಸಿ ಪ್ರತಿಪಕ್ಷ ಬಿಜೆಪಿ ವಿಧಾನಸೌಧದ ಆವರಣದಲ್ಲಿರುವ ತಾಯಿ ಭುವನೇಶ್ವರಿ ಪ್ರತಿಮೆ ಮುಂದೆ ಬೃಹತ್ ಪ್ರತಿಭಟನೆ ನಡೆಸಿತು.**

ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್. ಅಶೋಕ್, ವಿಧಾನಪರಿಷತ್ ಪ್ರತಿಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಸೇ–ರಿದಂತೆ ಶಾಸಕರು ಹಾಗೂ ವಿಧಾನಪರಿಷತ್




ಸದಸ್ಯರು ಪ್ರತಿಭಟನೆಯಲ್ಲಿ ಭಾಗವಹಿಸಿ, ಸರ್ಕಾರದ ವಿರುದ್ಧ ಧಿಕ್ಕಾರದ ಘೋಷಣೆಗಳನ್ನು ಕೂಗಿದರು. ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನೂರಾರು ಕೋಟಿ ರೂಪಾಯಿ ಭ್ರಷ್ಟಾಚಾರ ನಡೆಸಿದ ಆರೋಪ ಎದುರಿಸುತ್ತಿರುವ ನಾಗೇಂದ್ರ ಅವರನ್ನು ತಕ್ಷಣವೇ ಸಚಿವ ಸಂಪುಟದಿಂದ ಕೈಬಿಡಬೇಕು. ಇಲ್ಲದಿದ್ದರೆ ಸದನವನ್ನು ಸುಗಮವಾಗಿ ನಡೆಸಲು ಅವಕಾಶ ನೀಡುವುದಿಲ್ಲ ಎಂದು ಪ್ರತಿಭಟನಾಕಾರರು ಸರ್ಕಾರಕ್ಕೆ ಎಚ್ಚರಿಕೆ ನೀಡಿದರು.

ನ್ಯಾಯಾಲಯದ ನಿರ್ದೇಶನವನ್ನು ಉಲ್ಲಂಘಿಸಿ ನಾಗೇಂದ್ರ ಅವರು ದೆಹಲಿಗೆ ತೆರಳಿ ಬಂದಿರುವುದು ಸ್ಪಷ್ಟವಾಗಿದೆ. ಕರ್ನಾಟಕ ಬಿಟ್ಟು ನ್ಯಾಯಾಲಯದ ಅನುಮತಿ ಇಲ್ಲದೆ ಹೊರರಾಜ್ಯಗಳಿಗೆ ತೆರಳುವಂತಿಲ್ಲ ಎಂದು ನ್ಯಾಯಾಲಯ ಸೂಚಿಸಿತ್ತು. ಆದರೆ ಸಚಿವ ಸಂಪುಟ ವಿಸ್ತರಣೆ ವೇಳೆ ಅವರು ನ್ಯಾಯಾಲಯದ ಅನುಮತಿಯನ್ನು ಧಿಕ್ಕರಿಸಿ ದೆಹಲಿಗೆ ತೆರಳಿ ಬಂದಿದ್ದಾರೆ. ಈ ವಿಚಾರ ಮಾಧ್ಯಮಗಳಲ್ಲಿ ಬಹಿರಂಗಗೊಂಡಿದೆ ಎಂದು ಬಿಜೆಪಿ ಮುಖಂಡರು ಆರೋಪಿಸಿದರು.

ಆರೋಪಿ ಸ್ಥಾನದಲ್ಲಿರುವ ನಾಗೇಂದ್ರ ಅವರನ್ನು ಕೂಡಲೇ ಸಚಿವ ಸಂಪುಟದಿಂದ ಕೈಬಿಡಬೇಕು ಎಂದು ಆಗ್ರಹಿಸಿದ ಬಿಜೆಪಿ ನಾಯಕರು, ಭ್ರಷ್ಟಾಚಾರದ ವಿರುದ್ಧ ಶೂನ್ಯ ಸಹಿಷ್ಣುತೆ ಎಂದು ಹೇಳಿಕೊಳ್ಳುವ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಭ್ರಷ್ಟಾಚಾರದ ಆರೋಪ ಹೊತ್ತಿರುವ ನಾಗೇಂದ್ರ ಅವರನ್ನು ತಕ್ಷಣವೇ ಸಂಪುಟದಿಂದ ಕೈಬಿಡಬೇಕು ಎಂದು ಒತ್ತಾಯಿಸಿದರು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಕುನ್ನಟಗಿ ಹಾಗೂ ಗುಂಟೂರು ಕ್ಯಾಂಪ್‌ಗಳಲ್ಲಿ ಸಿಸಿ ರಸ್ತೆ ಕಾಮಗಾರಿಗಳಿಗೆ ಭೂಮಿಪೂಜೆ – ಬಾಬಾಗೌಡ ಬಾದರ್ಲಿ

**ನೈಜ್ಯ ದೆಸೆ ನ್ಯೂಸ್**

**ಸಿಂಧನೂರು: ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಆದ–ೄತೆ ನೀಡುವ ನಿಟ್ಟಿನಲ್ಲಿ ಕುನ್ನಟಗಿ ಕ್ಯಾಂಪ್ ಹಾಗೂ ಗುಂಟೂರು ಕ್ಯಾಂಪ್‌ಗಳಲ್ಲಿ ಒಟ್ಟು ?50 ಲಕ್ಷ ವೆಚ್ಚದಲ್ಲಿ ಸಿಸಿ ರಸ್ತೆ ನಿರ್ಮಾಣ ಕಾಮಗಾರಿಗಳಿಗೆ ಇಂದು ಭೂಮಿಪೂಜೆ ನೆರವೇರಿಸಲಾಯಿತು.**

ಕುನ್ನಟಗಿ ಕ್ಯಾಂಪ್‌ನಲ್ಲಿ ?25 ಲಕ್ಷ ವೆಚ್ಚದಲ್ಲಿ ಹಾಗೂ ಗುಂಟೂರು ಕ್ಯಾಂಪ್‌ನಲ್ಲಿ ?25 ಲಕ್ಷ ವೆಚ್ಚದಲ್ಲಿ ಸಿಸಿ ರಸ್ತೆ ನಿರ್ಮಾಣ ಕಾಮಗಾ–ರಿಗಳನ್ನು ಕೈಗೆತ್ತಿಕೊಳ್ಳಲಾಗಿದ್ದು, ಎರಡೂ ಕಾಮಗಾರಿಗಳಿಗೆ ಭೂಮಿಪೂಜೆ ನೆರವೇರಿಸುವ ಮೂಲಕ ಅಧಿಕೃತವಾಗಿ ಚಾಲನೆ ನೀಡಲಾಯಿತು. ಮಾನ್ಯ ಜನಪ್ರಿಯ ಶಾಸಕರಾದ ಶ್ರೀ ಹಂಪನಗೌಡ ಬಾದರ್ಲಿ ಸಾಹೇಬರ ಅನುಪಸ್ಥಿತಿಯಲ್ಲಿ, ಅವರ ಪುತ್ರರಾದ ಶ್ರೀ ಬಾಬುಗೌಡ ಬಾದರ್ಲಿ, ಸುಡಾ ಅಧ್ಯಕ್ಷರು, ಅವರು ಎರಡೂ ಸ್ಥಳಗಳಲ್ಲಿ ಸಿಸಿ ರಸ್ತೆ ನಿರ್ಮಾಣ ಕಾಮಗಾ–ರಿಗಳಿಗೆ ಭೂಮಿಪೂಜೆ ನೆರವೇರಿಸಿದರು.



ಕ್ಷೇತ್ರದ ವಿವಿಧ ಗ್ರಾಮಗಳು ಹಾಗೂ ಕ್ಯಾಂಪ್‌ಗಳಲ್ಲಿ ಮೂಲಸೌಕರ್ಯ ಅಭಿವೃದ್ಧಿಗೆ ಹೆಚ್ಚಿನ ಆದ–ೄತೆ ನೀಡಲಾಗುತ್ತಿದ್ದು, ಜನರ ದೈನಂದಿನ ಜೀವನಕ್ಕೆ ಅಗತ್ಯವಾಗಿರುವ ಉತ್ತಮ ರಸ್ತೆ, ಚರಂಡಿ, ಕುಡಿಯುವ ನೀರು ಸೇರಿದಂತೆ ವಿವಿಧ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುವ ನಿಟ್ಟಿನಲ್ಲಿ ನಿರಂತರವಾಗಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ.

ಕುನ್ನಟಗಿ ಹಾಗೂ ಗುಂಟೂರು ಕ್ಯಾಂಪ್‌ಗಳಲ್ಲಿ ನಿರ್ಮಾಣವಾಗಲಿರುವ ಸಿಸಿ ರಸ್ತೆಗಳು ಸ್ಥಳೀಯ ನಿವಾಸಿಗಳಿಗೆ ಬಹಳಷ್ಟು ಅನುಕೂಲ ಕಲ್ಪಿಸಲಿವೆ. ಮಳೆಗಾಲದಲ್ಲಿ ರಸ್ತೆಗಳಲ್ಲಿ ಉಂಟಾಗುವ ಸಮಸ್ಯೆ, ಕೆಸರು ಹಾಗೂ ಸಂಚಾರಕ್ಕೆ ಎದುರಾಗುವ ತೊಂದರೆಗಳನ್ನು ಕಡಿಮೆ ಮಾಡುವುದರ ಜೊತೆಗೆ, ಸಾರ್ವಜನಿಕರು ಸುಗಮವಾಗಿ ಸಂಚ–ರಿಸಲು ಈ ರಸ್ತೆಗಳು ಸಹಕಾರಿಯಾಗಲಿವೆ. ವಿದ್ಯಾರ್ಥಿಗಳು, ರೈತರು, ಮಹಿಳೆಯರು, ಹಿರಿಯ ನಾಗರಿಕರು, ವ್ಯಾಪಾರಸ್ಥರು ಸೇ–ರಿದಂತೆ ಪ್ರತಿನಿತ್ಯ ಸಂಚರಿಸುವ ಎಲ್ಲ ವರ್ಗದ ಜನರಿಗೆ ಈ ರಸ್ತೆ ಕಾಮಗಾರಿಗಳಿಂದ ಅನುಕೂಲವಾಗಲಿದೆ. ಉತ್ತಮ ಗುಣಮಟ್ಟದ ರಸ್ತೆ ನಿರ್ಮಾಣದಿಂದ ಕ್ಯಾಂಪ್‌ಗಳ ಸಂಪರ್ಕ ವ್ಯವಸ್ಥೆ ಮತ್ತಷ್ಟು ಸುಧಾರಣೆಯಾಗುವ ನಿರೀಕ್ಷೆಯಿದೆ.

ಶಾಸಕ ಶ್ರೀ ಹಂಪನಗೌಡ ಬಾದರ್ಲಿ ಸಾಹೇಬರ ನೇತೃತ್ವದಲ್ಲಿ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ನಿರಂತರವಾಗಿ ಒತ್ತು ನೀಡಲಾಗುತ್ತಿದ್ದು, ಜನರ ಅಗತ್ಯತೆ ಹಾಗೂ ಬಹುದಿನಗಳ ಬೇಡಿಕೆಗಳಿಗೆ ಸ್ಪಂದಿಸಿ ಹಂತ ಹಂತವಾಗಿ ವಿವಿಧ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಜನರಿಗೆ ಅಗತ್ಯವಿರುವ ಮೂಲಸೌಕರ್ಯಗಳನ್ನು ಒದಗಿಸುವುದು ಹಾಗೂ ಕ್ಷೇತ್ರದ ಪ್ರತಿಯೊಂದು ಪ್ರದೇಶವನ್ನು ಅಭಿವೃದ್ಧಿಯ ಮುಖ್ಯವಾಹಿನಿಗೆ ತರುವುದು ನಮ್ಮ ಪ್ರಮುಖ ಗು–ರಿಯಾಗಿದೆ. ಈ ನಿಟ್ಟಿನಲ್ಲಿ ಕುನ್ನಟಗಿ ಕ್ಯಾಂಪ್ ಹಾಗೂ ಗುಂಟೂರು ಕ್ಯಾಂಪ್‌ನಲ್ಲಿ ಕೈಗೆತ್ತಿಕೊಂಡಿರುವ ಸಿಸಿ ರಸ್ತೆ ಕಾಮಗಾರಿಗಳು ಅಭಿವೃದ್ಧಿಯ ಪಯಣದಲ್ಲಿ ಮತ್ತೊಂದು ಮಹತ್ವದ ಹೆಜ್ಜೆಯಾಗಿವೆ. ಕ್ಷೇತ್ರದ ಅಭಿವೃದ್ಧಿ ಕಾರ್ಯಗಳಿಗೆ ಜನರಿಂದಲೂ ಉತ್ತಮ ಸ್ಪಂದನೆ ವ್ಯಕ್ತವಾಗುತ್ತಿದ್ದು, ಮುಂದಿನ ದಿನಗಳಲ್ಲಿಯೂ ಜನಪರ ಹಾಗೂ ಅಭಿವೃದ್ಧಿಪರ ಕಾಮಗಾರಿಗಳು ನಿರಂತರವಾಗಿ ಮುಂದುವ–ರಿಯಲಿವೆ.ಜನರ ಆಶಯಗಳಿಗೆ ಸ್ಪಂದನೆ ? ಅಭಿವೃದ್ಧಿಗೆ ವೇಗ ? ಕ್ಷೇತ್ರದ ಸಮಗ್ರ ಪ್ರಗತಿಗೆ ಸಂಕಲ್ಪ.

## ನೇಮಕಾತಿ ಪ್ರಕಟಣೆ

ಏಇಂ ನೇಮಕಾತಿ 2026– 233 ಫಾರ್ಮಸಿ ಆಫೀಸರ್ ಮತ್ತು ನರ್ಸಿಂಗ್ ಆಫೀಸರ್ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ
ಆಗಸ್ಟ್ 7, 2026

KEA ನೇಮಕಾತಿ 2026: 233 ಫಾರ್ಮಸಿ ಆಫೀಸರ್ ಮತ್ತು ನರ್ಸಿಂಗ್ ಆಫೀಸರ್ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಕರ್ನಾಟಕ ಪರೀಕ್ಷಾ ಪ್ರಾಧಿಕಾರವು (KEA) ಆಗಸ್ಟ್ 2026ರ ಅಧಿಕೃತ ಅಧಿಸೂಚನೆಯ ಮೂಲಕ ಫಾರ್ಮಸಿ ಆಫೀಸರ್ ಮತ್ತು ನರ್ಸಿಂಗ್ ಆಫೀಸರ್ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಕರ್ನಾಟಕ ಸರ್ಕಾರದಲ್ಲಿ ಉದ್ಯೋಗವನ್ನು ಬಯಸುವವರು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 30–ಆಗಸ್ಟ್–2026 ರೊಳಗೆ ಅಥವಾ ಅಂ–ದು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಅಧಿಕೃತ ವೆಬ್‌ಸೈಟ್: cetonline.karnataka.gov.in


## ನೇತಾಜಿ ಶಿಕ್ಷಣ ಸಂಸ್ಥೆಯಿಂದ 80 ಮೀ. ಉದ್ದದ ಬೃಹತ್ ತ್ರಿವರ್ಣ ಧ್ವಜ ಮೆರವಣಿಗೆ

# ದೇಶಭಕ್ತಿ ಮನೆಮನೆಗಳಲ್ಲಿ ಮೊಳಗಬೇಕು: ಹಂಪಯ್ಯ ನಾಯಕ

ನೈಜ್ಯ ದೆಸೆ ನ್ಯೂಸ್

ಮಾನ್ವಿ: ಇಂದಿನ ಪರಿಸ್ಥಿತಿಯಲ್ಲಿ ಪ್ರತಿಯೊಬ್ಬರೂ ದೇಶದ ಬಗ್ಗೆ ಅಭಿಮಾನ ಹೊಂದುವುದರ ಜೊತೆಗೆ ದೇಶಪ್ರೇಮವನ್ನು ಬೆಳೆಸಿಕೊಳ್ಳಬೇಕು ಎಂದು ಶಾಸಕ ಹಂಪಯ್ಯ ನಾಯಕ ಹೇಳಿದರು.

ಪಟ್ಟಣದ ನೇತಾಜಿ ಶಿಕ್ಷಣ ಸಂಸ್ಥೆಯ ವತಿಯಿಂದ ದೇಶದ 80ನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ ಹಮ್ಮಿಕೊಂಡಿದ್ದ 80 ಮೀಟ–ರ್ ಉದ್ದದ ಬೃಹತ್ ತ್ರಿವರ್ಣ ಧ್ವಜ ಮೆರವಣಿಗೆಗೆ ಚಾಲನೆ ನೀಡಿ ಅವರು ಮಾತನಾಡಿದರು. ಎಲ್ಲರಲ್ಲೂ ದೇಶಪ್ರೇಮದ ಭಾವನೆ ಮೂಡಿಸುವ ಉದ್ದೇಶದಿಂದ ನೇತಾಜಿ ಶಿಕ್ಷಣ ಸಂಸ್ಥೆಯವರು ತಿರಂಗಾ ಮೆರವಣಿಗೆ ಆಯೋಜಿಸಿರುವುದು ಶ್ಲಾಘನೀಯ ಕಾರ್ಯವಾಗಿದೆ. ಸಂಸ್ಥೆಯ ವಿದ್ಯಾರ್ಥಿಗಳು, ಶಿಕ್ಷಕರು, ಉಪನ್ಯಾಸಕರು ಸೇರಿದಂತೆ ಸಾರ್ವಜನಿಕರು ಸಹ



ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿರುವುದು ಸಂತಸ ತಂದಿದೆ. ಇಂತಹ ಅರ್ಥಪೂರ್ಣ ಕಾರ್ಯಕ್ರಮವನ್ನು ಆಯೋಜಿಸಿದ ನೇತಾಜಿ ಶಿಕ್ಷಣ ಸಂಸ್ಥೆಯ ಕೆ.ಇ. ನರಸಿಂಹ ಹಾಗೂ ವಿಜಯಲಕ್ಷ್ಮಿ ದಂಪತಿಗಳಿಗೆ ಅಭಿನಂದನೆ ಸಲ್ಲಿಸುವುದಾಗಿ ಶಾಸಕ ಹಂಪಯ್ಯ ನಾಯಕ ಹೇಳಿದರು.

ಮೆರವಣಿಗೆಯಲ್ಲಿ ಶಾಸಕ ಹಂಪಯ್ಯ ನಾಯಕ, ಕ್ಷೇತ್ರ ಶಿಕ್ಷಣಾಧಿಕಾರಿ ಚಂದ್ರಶೇಖರ ದೊಡ್ಡಮನಿ, ತಹಶೀಲ್ದಾರ್ ಭೀಮರಾಯ ರಾಮಸಮುದ್ರ, ಪೊಲೀಸ್ ಅಧಿಕಾರಿ ಕೆಂಚರೆಡ್ಡಿ, ಪಕ್ಷಿಪ್ರೇಮಿ ಸಲ್ಲಾವುದ್ದೀನ್, ಖಾಸಗಿ ಶಿಕ್ಷಣ ಸಂಸ್ಥೆಗಳ ಒಕ್ಕೂಟದ ಅಧ್ಯಕ್ಷ ಸುಭಾಷ್ ನಾಯಕ, ಶರ್ಫುದ್ದೀನ್ ಪೋತ್ನಾಳ್, ರಾಜು ತಾಳಿಕೋಟಿ, ಬಿ.ಕೆ. ಅಮರೇಶಪ್ಪ, ಅಬ್ದುಲ್ ಗಫೂರ್ ಸಾಬ್, ಟಿ. ನಾಗರಾಜ್, ಡಾ. ಕೆ. ವಿನಯ, ಕೆ. ರಾಜ ರವಿವರ್ಮ ಸೇರಿದಂತೆ ಸಾವಿರಾರು ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

80 ಮೀಟರ್ ಉದ್ದದ ಬೃಹತ್ ತ್ರಿವರ್ಣ ಧ್ವಜದ ಮೆರವಣಿಗೆ, ವಿವಿಧ ರಾಷ್ಟ್ರೀಯ ನಾಯಕರ ವೇಷಧಾರಿ ವಿದ್ಯಾರ್ಥಿಗಳು, ಎನ್‌ಸಿಸಿ ತಂಡ ಹಾಗೂ ಸೇವಾದಳ ತಂಡಗಳು ಸಾರ್ವಜನಿಕರ ಗಮನ ಸೆಳೆದವು.

## 301 ಪೊಲೀಸರು, ಅಗ್ನಿಶಾಮಕ ಸಿಬ್ಬಂದಿಗೆ ಶೌರ್ಯ ಪದಕ

ನೈಜ್ಯ ದೆಸೆ ನ್ಯೂಸ್

ನವದೆಹಲಿ: ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಪೊಲೀಸ್ ಮತ್ತು ಅಗ್ನಿಶಾಮಕ ಸೇವೆಗಳ ಸಿಬ್ಬಂದಿಗೆ ಕೇಂದ್ರ ಸರ್ಕಾರ 301 ಶೌರ್ಯ ಪದಕಗಳನ್ನು ಘೋಷಿಸಿದೆ. ಈ 301 ಶೌರ್ಯ ಪದಕಗಳ ಪೈಕಿ ಎಡಪಂಥೀಯ ಉಗ್ರವಾದ (ಎಲ್‌ಡಬ್ಲ್ಯುಇ) ಪೀಡಿತ ಪ್ರದೇಶಗಳಲ್ಲಿ ಸೇವೆ ಸಲ್ಲಿಸಿದ 197 ಸಿಬ್ಬಂದಿಗೆ ಪದಕ ನೀಡಲಾಗಿದೆ ಎಂದು ಸರ್ಕಾರ ತಿಳಿಸಿದೆ.




ಒಟ್ಟಾರೆ ಪೊಲೀಸ್, ಅಗ್ನಿಶಾಮಕ, ಗೃಹರಕ್ಷಕ ದಳ ಮತ್ತು ನಾಗರಿಕ ರಕ್ಷಣಾ (ಎಚ್‌ಜಿಸಿಡಿ) ಹಾಗೂ ಕಾರಾಗೃಹ ಸೇವೆಗಳ 1,057 ಸಿಬ್ಬಂದಿಯನ್ನು ಈ ಸ್ವಾತಂತ್ರ್ಯ ದಿನದಂದು ಶೌರ್ಯ ಮತ್ತು ಸೇವಾ ಪದಕಗಳ ಮೂಲಕ ಗೌರವಿಸಲಾಗುತ್ತಿದೆ. ಜೀವ ಮತ್ತು ಆಸ್ತಿಯನ್ನು ರಕ್ಷಿಸುವಲ್ಲಿ, ಅಪರಾಧ ತಡೆಯುವಲ್ಲಿ ಅಥವಾ ಅಪರಾಧಿಗಳನ್ನು ಬಂಧಿಸುವಲ್ಲಿ ಗಮನಾರ್ಹ ಶೌರ್ಯ ಪ್ರದರ್ಶಿಸಿದ ಸಿಬ್ಬಂದಿಗೆ, ಅವರ ಕರ್ತವ್ಯ ಮತ್ತು ಜವಾಬ್ದಾರಿಗಳಿಗೆ ಅನುಗುಣವಾಗಿ ಅವರು ಎದುರಿಸಿದ ಅಪಾಯವನ್ನು ಪರಿಗಣಿಸಿ ಶೌರ್ಯ ಪದಕ ನೀಡಲಾಗುತ್ತದೆ ಎಂದು ಸರ್ಕಾರ ತಿಳಿಸಿದೆ. 301 ಶೌರ್ಯ ಪದಕ ಪುರಸ್ಕೃತರಲ್ಲಿ 272 ಮಂದಿ ಪೊಲೀಸ್ ಸಿಬ್ಬಂದಿಯಾಗಿದ್ದು, 29 ಮಂದಿ ಅಗ್ನಿಶಾಮಕ ಸೇವೆಯ ಸಿಬ್ಬಂದಿಯಾಗಿದ್ದಾರೆ. ಇವರ ಪೈಕಿ ಎಡಪಂಥೀಯ ಉಗ್ರವಾದ ಪೀಡಿತ ಪ್ರದೇಶಗಳ 197 ಮಂದಿ, ಜಮ್ಮು ಮತ್ತು ಕಾಶ್ಮೀರದ 51 ಮಂದಿ, ಈಶಾನ್ಯ ರಾಜ್ಯಗಳ 12 ಮಂದಿ ಹಾಗೂ ಇತರ ಪ್ರದೇಶಗಳ 41 ಮಂದಿ ತಮ್ಮ ಧೈರ್ಯಶಾಲಿ ಕಾರ್ಯಾಚರಣೆಗಳಿಗಾಗಿ ಗೌರವಿಸಲ್ಪಟ್ಟಿದ್ದಾರೆ. ಇದಲ್ಲದೆ, 92 ಪೊಲೀಸ್ ಸಿಬ್ಬಂದಿಗೆ ರಾಷ್ಟ್ರಪತಿ ಪದಕ (ವಿಶಿಷ್ಟ ಸೇವೆ) ನೀಡುವುದಾಗಿ ಕೇಂದ್ರ ಸರ್ಕಾರ ಘೋಷಿಸಿದೆ. ಈ ಪೈಕಿ 83 ಮಂದಿ ಪೊಲೀಸ್ ಸೇವೆಯವರು, ನಾಲ್ವರು ಅಗ್ನಿಶಾಮಕ ಸೇವೆಯವರು, ಮೂವರು ನಾಗರಿಕ ರಕ್ಷಣಾ ಮತ್ತು ಗೃಹರಕ್ಷಕ ದಳದವರು ಹಾಗೂ ಇಬ್ಬರು ಕಾರಾಗೃಹ ಸೇವೆಯ ಸಿಬ್ಬಂದಿಯಾಗಿದ್ದಾರೆ. ವಿಶಿಷ್ಟ ಸೇವೆಯಲ್ಲಿ ವಿಶೇಷ ಸಾಧನೆಯ ದಾಖಲೆಯನ್ನು ಹೊಂದಿರುವ ಸಿಬ್ಬಂದಿಗೆ ರಾಷ್ಟ್ರಪತಿ ಪದಕ ನೀಡಲಾಗುತ್ತದೆ ಎಂದು ಸರ್ಕಾರ ತಿಳಿಸಿದೆ. ಅದೇ ರೀತಿ, ಮೌಲ್ಯಯುತ ಸೇವೆ, ಕಾರ್ಯಕ್ಷಮತೆ ಮತ್ತು ಕರ್ತವ್ಯನಿಷ್ಠೆಗಾಗಿ ನೀಡಲಾಗುವ ಶ್ಲಾಘನೀಯ ಸೇವಾ ಪದಕ (ಎಂಎಸ್‌ಎಂ) ವಿಭಾಗದಲ್ಲಿ ಒಟ್ಟು 664 ಪದಕಗಳನ್ನು ನೀಡಲಾಗಿದೆ. ಇವುಗಳಲ್ಲಿ 606 ಪೊಲೀಸ್ ಸಿಬ್ಬಂದಿಗೆ, 28 ಅಗ್ನಿಶಾಮಕ ಸೇವಾ ಸಿಬ್ಬಂದಿಗೆ, 18 ನಾಗರಿಕ ರಕ್ಷಣಾ ಮತ್ತು ಗೃಹರಕ್ಷಕ ದಳದ ಸಿಬ್ಬಂದಿಗೆ ಹಾಗೂ 12 ಕಾರಾಗೃಹ ಸೇವಾ ಸಿಬ್ಬಂದಿಗೆ ನೀಡಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.


ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.


## ಬದುಕಿರುವ ವ್ಯಕ್ತಿಯನ್ನು ಮೃತರೆಂದು ಪಟ್ಟಿ ಮಾಡಿದ ಚುನಾವಣಾ ಆಯೋಗ: ರಾಮಸಾಗರದಲ್ಲಿ ಆಘಾತಕಾರಿ ಘಟನೆ

ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ / ಕಂಪ್ಲಿ : ಬಳ್ಳಾರಿ ಜಿಲ್ಲೆಯ ಕಂಪ್ಲಿ ವಿಧಾನಸಭಾ ಕ್ಷೇತ್ರದ ರಾಮಸಾಗರ ಗ್ರಾಮದ ಮತದಾರರ ಪಟ್ಟಿಯಲ್ಲಿ ಆಘಾತಕಾರಿ ಲೋಪವೊಂದು ಬೆಳಕಿಗೆ ಬಂದಿದೆ. ರಾಮಸಾಗರ ಗ್ರಾಮದ ನಿವಾಸಿ ಆನೆ ಪ್ರಕಾಶ (ತಂದೆ: ಆನೆ ಈರಪ್ಪ) ಅವರನ್ನು ಚುನಾವಣಾ ಆಯೋಗವು ಮೃತಪಟ್ಟಿದ್ದಾರೆ ಎಂದು ಪರಿಗಣಿಸಿ, ಅವರ ಹೆಸರನ್ನು ಮತದಾರರ ಪಟ್ಟಿಯಿಂದ ತೆಗೆದುಹಾಕುವ ಉದ್ದೇಶದಿಂದ ಎಎಸ್‌ಡಿಡಿಒ (ಖಔಆಆಔ) ಪಟ್ಟಿಯಲ್ಲಿ ಸೇ–ರಿಸಿರುವುದು ವಿವಾದಕ್ಕೆ ಕಾರಣವಾಗಿದೆ.**

ಆನೆ ಪ್ರಕಾಶ ಅವರಿಗೆ ಸುಮಾರು 70 ವರ್ಷ ವಯಸ್ಸಾಗಿದ್ದು, ವಯಸ್ಸಿನ ಆದ–ಾರದ ಮೇಲೆ ಅವರನ್ನು ಮೃತಪಟ್ಟಿದ್ದಾರೆ ಎಂದು ಗುರುತಿಸಲಾಗಿದೆ ಎನ್ನಲಾಗಿದೆ. ಆದ–'ರೆ ವಾಸ್ತವವಾಗಿ ಅವರು ಜೀವಂತವಾಗಿದ್ದು, ತಮ್ಮ ಸ್ವಂತ ನಿವಾಸದಲ್ಲಿಯೇ ವಾಸಿಸುತ್ತಿದ್ದಾರೆ. ಚುನಾವಣಾ ಆಯೋಗದ ಪಟ್ಟಿಯಲ್ಲಿ



ಮೃತರೆಂದು ನಮೂದಿಸಲಾಗಿರುವ ವ್ಯಕ್ತಿ ತಾವೇ ಎಂದು ಸ್ಪಷ್ಟಪಡಿಸಿರುವ ಆನೆ ಪ್ರಕಾಶ ಅವರು, ತಮ್ಮ ಆಧಾರ್ ಕಾರ್ಡ್ ತೋರಿಸಿ ತಮ್ಮ ಅಸ್ತಿತ್ವವನ್ನು ಸಾಬೀತುಪಡಿಸಿದ್ದಾರೆ.

ಈ ಕುರಿತು ಆಕ್ರೋಶ ವ್ಯಕ್ತಪಡಿಸಿರುವ ಕರ್ನಾಟಕ ಜನಶಕ್ತಿ ಸಂಘಟನೆಯ ಮುಖಂಡ ವಸಂತರಾಜ್ ಕಹಳೆ, ಚುನಾವಣಾ ಆಯೋಗದ ಎಸ್‌ಐಆರ್ ಪ್ರಕ್ರಿಯೆಯನ್ನು ತೀವ್ರವಾಗಿ ಟೀಕಿಸಿದ್ದಾರೆ.

"ಚುನಾವಣಾ ಆಯೋಗ ನಡೆಸುತ್ತಿರುವ ಎಸ್‌ಐಆರ್ ಪ್ರಕ್ರಿಯೆಯು



ಚುನಾವಣಾ ಆಯೋಗದ ಖಖಖ ನ ಂಖಆ–ಆಔ ಪಟ್ಟಿಯಲ್ಲಿ ಆನೆ ಪ್ರಕಾಶ್ ಅವರನ್ನು ಮೃತ ಎಂದು ದಾಖಲಿಸಿದೆ.

ಸಂಪೂರ್ಣ ಗೊಂದಲಕಾರಿ, ಅಸಂಬದ್ಧ ಹಾಗೂ ಅಸಂವಿಧಾನಿಕವಾಗಿದೆ. ಎಎಸ್‌ಡಿ–ಡಿಒ ಪಟ್ಟಿಯಲ್ಲಿ ಬದುಕಿರುವವರನ್ನೇ ಸತ್ತಿದ್ದಾರೆಂದು ಪಟ್ಟಿ ಮಾಡಲಾಗಿದೆ. ಕಂಪ್ಲಿ ತಾಲೂಕಿನ ರಾಮಸಾಗರ ಗ್ರಾಮದ 1ನೇ ವಾರ್ಡ್‌ನ ನಿವಾಸಿ ಆನೆ ಪ್ರಕಾಶ ಅವರೇ ಇದಕ್ಕೆ ಜೀವಂತ ಸಾಕ್ಷಿ. ವಾಸ್ತವವಾಗಿ ಬದುಕಿರುವ ವ್ಯಕ್ತಿಯನ್ನು ಮೃತರೆಂದು ದಾಖಲಿಸಿ ಮತಾಧಿಕಾರ ಕಸಿಯುವ ಪ್ರಯತ್ನ ನಡೆದಿದೆ. ಈ ಲೋಪಕ್ಕೆ ಚುನಾವಣಾ ಆಯೋಗ, ಸ್ಥಳೀಯ ಅಧಿಕಾರಿಗಳು ಹಾಗೂ ಸಂಬಂಧಪಟ್ಟ ಸಿಬ್ಬಂದಿ ಹೊಣೆಗಾರರಾಗಬೇಕು," ಎಂದು ಅವರು ಆರೋಪಿಸಿದ್ದಾರೆ.

ಮತದಾರರ ಅಸ್ತಿತ್ವವನ್ನು ಸಮರ್ಪಕವಾಗಿ ಪರಿಶೀಲಿಸದೇ ಎಎಸ್‌ಡಿಡಿಒ ಪಟ್ಟಿಯಲ್ಲಿ ಹೆಸರು ಸೇರಿಸಿ, ಮತದಾರರ ಪಟ್ಟಿಯಿಂದ ತೆಗೆದುಹಾಕಲು ಮುಂದಾಗಿರುವುದು ಗಂಭೀರ ನಿರ್ಲಕ್ಷ್ಯ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಇದೀಗ ತಮ್ಮ ಮತದಾನದ ಹಕ್ಕನ್ನು ಉಳಿಸಿಕೊಳ್ಳಲು ಆನೆ ಪ್ರಕಾಶ ಅವರು ಫಾರ್ಮ್–6 ಅರ್ಜಿ ಸಲ್ಲಿಸಬೇಕು ಎಂದು ಚುನಾವಣಾ ಆಯೋಗ ಸೂಚಿಸಿರುವುದು ಮತ್ತಷ್ಟು ಪ್ರಶ್ನೆಗಳನ್ನು ಹುಟ್ಟುಹಾಕಿದೆ.


ಬದುಕಿರುವ ವ್ಯಕ್ತಿಯನ್ನೇ ಮೃತರೆಂದು ದಾಖಲಿಸಿ ಮತದಾರರ ಪಟ್ಟಿಯಿಂದ ತೆಗೆದುಹಾಕುವ ಪ್ರಕ್ರಿಯೆ ಕುರಿತು ಚುನಾವಣಾ ಆಯೋಗ ಸ್ಪಷ್ಟನೆ ನೀಡಬೇಕು ಹಾಗೂ ಆನೆ ಪ್ರಕಾಶ ಅವರ ಮತದಾರರ ಹಕ್ಕನ್ನು ತಕ್ಷಣ ಮರುಸ್ಥಾಪಿಸಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

## ವಿಜಯ ರಾಘವೇಂದ್ರ ಅಭಿನಯದ 'ರುದ್ರಾಭಿಷೇಕಂ' ಚಿತ್ರ ಸೆ.25ಕ್ಕೆ ತೆರೆಗೆ

ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: 'ಪಾನ್ ಇಂಡಿಯಾ ಕ್ರಿಯೇಷನ್ಸ್' ವಿಜಯಪುರ ಅವರ ನ್ಯಾಚುರಲ್ ಸ್ಟಾರ್ ವಿಜಯರಾಘವೇಂದ್ರ ದ್ವಿಪಾತ್ರದಲ್ಲಿ ಅಭಿನಯಿಸಿರುವ 'ರುದ್ರಾಭಿಷೇಕಂ' ಸೆಪ್ಟಂಬರ್ 25ರಂದು ರಾಜ್ಯಾದ್ಯಂತ ಬಿಡುಗಡೆ ಆಗಲಿದೆ.**

'ಪಾನ್ ಇಂಡಿಯಾ ಕ್ರಿಯೇಶನ್ಸ್' (ವಿಜಯಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ) ಸಂಸ್ಥೆಯು ಈ ಚಿತ್ರದ ಮೂಲಕ ಕನ್ನಡ ಚಲನಚಿತ್ರರಂಗಕ್ಕೆ ಪ್ರಪ್ರಥಮ ಬಾರಿಗೆ ಪಾದಾರ್ಪಣೆ ಮಾಡುತ್ತಿದ್ದು ಚಿತ್ರದಲ್ಲಿ ನಟ ವಿಜಯ ರಾಘವೇಂದ್ರ ಅವರದು ವಿಶಿಷ್ಟವಾದ ವೀರಗಾಸೆ ಪಾತ್ರದಲ್ಲಿ ಮಿಂಚಿದ್ದಾರೆ. ವೀರಭದ್ರ ಸ್ವಾಮಿಯ ಜಾನಪದ ಕಥೆ ಹಿನ್ನೆಲೆಯನ್ನು ಒಳಗೊಂಡ ಈ ಸಾಹಸಮಯ ಚಿತ್ರದಲ್ಲಿ ವಿಜಯ ರಾಘವೇಂದ್ರ ಅವರು ಹಿಂದೆಗೂ ಕಾಣದ ವಿಭಿನ್ನ ಹಾಗೂ ಶಕ್ತಿಶಾಲಿ ಪಾತ್ರದಲ್ಲಿ ಅಭಿನಯಿಸಿದ್ದಾರೆ. ನಾದಬ್ರಹ್ಮ ವಿ. ಮನೋಹರ್ ಅವರ ಸಂಗೀತ ಸಂಯೋಜನೆ ಮತ್ತು ಥ್ರಿಲ್ಲರ್ ಮಂಜು ಅವರ ಭರ್ಜರಿ ಸಾಹಸ ದೃಶ್ಯಗಳು



ಚಿತ್ರಕ್ಕೆ ಪ್ರಮುಖ ಆಕರ್ಷಣೆಯಾಗಿವೆ. ದೇವನಹಳ್ಳಿ, ಗೋಕರ್ಣ, ಹೊನ್ನಾವರ, ಕುಮಟಾ, ಅಬ್ಬಕ್ಕ ಫೋರ್ಟ್ ಹಾಗೂ ಅಘನಾಶಿನಿ ಹಿನ್ನೀರು ಪ್ರದೇಶಗಳಲ್ಲಿ 50ಕ್ಕೂ ಹೆಚ್ಚು ದಿನಗಳ ಕಾಲ ಚಿತ್ರೀಕರಣ ನಡೆಸಲಾಗಿದ್ದು ಈ ಚಿತ್ರವು ಕನ್ನಡ ಕಲಾಭಿಮಾನಿಗಳಲ್ಲಿ ಭಾರೀ ಕುತೂಹಲ ಮೂಡಿಸಿದ್ದು, ಸೆಪ್ಟೆಂಬರ್ 25ರಂದು ಅದ್ದೂರಿಯಾಗಿ ತೆರೆಗೆ ಬರಲಿದೆ ಎಂದು ನಿರ್ದೇಶಕ ವಸಂತಕುಮಾರ ತಿಳಿಸಿದ್ದಾರೆ.

ಚಿತ್ರದಲ್ಲಿ ನಾಯಕರಾಗಿ ನ್ಯಾಚುರಲ್ ಸ್ಟಾರ್ ವಿಜಯ ರಾಘವೇಂದ್ರ, ನಾಯಕಿಂ–ಯಾಗಿ 'ಮಿಲ್ಕ್ ಬ್ಯೂಟಿ' ಪ್ರಿಯಾಂಕಾ ತಿಮ್ಮೇಶ್, ರಾಜ್ ಬಲವಾಡಿ, ವಸಂತ್ ಕುಮಾರ್, ಮನು, ಬುಲೆಟ್ ವಿನು, ಸಂದೀಪ್, ಸನತ್, ಸೌಂದರ್ಯ, ನವನೀತ, ಮಮತಾ, ಸ್ವಾತಿ ಮೊದಲಾದವರಿದ್ದಾರೆ. ತಾಂತ್ರಿಕ ವರ್ಗದಲ್ಲಿ ಛಾಯಾಗ್ರಹಣ ಮುತ್ತುರಾಜ್, ವಿ.ಮನೋಹರ್ ಸಂಗೀತ , ಭಜರಂಗಿ ಮೋಹನ್ ನೃತ್ಯ ಸಂಯೋಜನೆ, ಥ್ರಿಲ್ಲರ್‌ಮಂಜು ಸಾಹಸ, ಬಾಬುಖಾನ್ ಕಲಾ ನಿರ್ದೇಶನ, ನೊಣವಿನಕೆರೆ ಕುಮಾರ ಪ್ರಸಾಧನ, ಮುತ್ತುರಾಜ್.ಟಿ ಸಂಕಲನ, ನಾಗೇಂದ್ರ, ಡಾ. ಪ್ರಭು.ಗಂಜಿಹಾಳ, ಡಾ.ವೀರೇಶ್ ಹಂಡಿಗಿ ಪಿ.ಆರ್.ಓ, ಸಹ ನಿರ್ದೇಶನ ಮನು ಮತ್ತು ಧೀರಜ್ ಅವರದಿದ್ದು, ಕೆ ವಸಂತ್‌ಕುಮಾರ್ ಕಥೆ–ಚಿತ್ರಕಥೆ ಬರೆದು ನಿರ್ದೇಶನ ಜೊತೆಗೆ ಚಿತ್ರಕ್ಕೆ ಹಾಡುಗಳನ್ನು ಬರೆದು ತತ್ವಜ್ಞಾನಿಯಾಗಿ ಅಭಿನಯಿಸಿದ್ದಾರೆ. ಎನ್. ಜಯರಾಮ್, ಕೆ. ಎನ್. ಮಂಜುನಾಥ್, ಕೆ. ವೆಂಕಟೇಶ್, ಬಿ. ಚಿದಾನಂದ ಮೂರ್ತಿ, ಸುರೇಶ್ ಬಾಬು, ರವಿ, ಅಶ್ವಥನಾರಾಯಣ, ಡಾ. ಎಮ್. ಶಿವಕುಮಾರ್ ಹಾಗೂ ಕುಸುಮ ವಸಂತ್ ಕುಮಾರ್ ಚಿತ್ರ ನಿರ್ಮಿಸಿದ್ದಾರೆ.

–ಡಾ.ಪ್ರಭು ಗಂಜಿಹಾಳ

# ಅಪ್ರತಿಮ ರಾಷ್ಟ್ರಪ್ರೇಮ ಸ್ವಾತಂತ್ರ್ಯ ಸೇನಾನಿ ಸಂಗೊಳ್ಳಿ ರಾಯಣ್ಣ

## ಗೆದ್ದ ಕಿತ್ತೂರ ತಂದು, ಉದ್ದ ಬೀಳುವೆ ತಾಯಿ ಕದ್ದ ಮಾತಲ್ಲ ನಿಮ್ಮಾಣೆ। ಇಲ್ಲದಿದ್ರ। ಬಿದ್ದು ಹೋಗುವೆ ರಣದಾಗ॥

ನೈಜ್ಯ ದೆಸೆ ನ್ಯೂಸ್


ಆ ಕೆಂಪು ಮೊಸಡಿಯ ಬ್ರಿಟೀಷರು ಮೋಸ ವಂಚನೆಯಿಂದ ನಿಮ್ಮಿಂದ ಕಿತ್ತುಕೊಂಡಿರುವ ಈ ಕಿತ್ತೂರು ಸಾಮ್ರಾಜ್ಯವನ್ನು ಮತ್ತೆ ಗೆದ್ದು ತಂದು ನಿಮ್ಮ ಪಾದಕ್ಕೆ ಸಮರ್ಪಿಸುತ್ತೇನೆ ತಾಯಿ, ಇದು ಕೇವಲ ಜಂಬದ ಮಾತಲ್ಲ. ಹಾಗೊಂದು ವೇಳೆ ಆಗದೇ ಹೋದರೆ ಸೋತ ಮುಖವನ್ನು ನಿಮಗೆ ತೋರಿಸುವುದಿಲ್ಲ ರಣರಂಗದಲ್ಲೆ ಮಡಿಯುತ್ತೇನೆ.

ಹೀಗೆ ರಾಣಿ ಚೆನ್ನಮ್ಮನ ಎದುರು ನಿಂತು ಆತ್ಮಾರ್ಪಣೆ ಪ್ರತಿಜ್ಞೆ ಮಾಡಿದವನು, ಆತ್ಮಬಲ ಬೇಗುದಿಯಿಂದ ಬಿನ್ನೈಸಿದವನು, ಕುದಿವರಕ್ತದಿ ವೀರಾವೇಶದಿಂದ ಘರ್ಜಿಸಿದವನು, ಅಪ್ರತಿಮ ರಾಷ್ಟ್ರಪ್ರೇಮಿ, ಸ್ವಾತಂತ್ರ್ಯ ಸೇನಾನಿ, ಕ್ರಾಂತಿಯ ಕಿಡಿ ಸಂಗೊಳ್ಳಿ ರಾಯಣ್ಣ.

15 ನೇ ಅಗಸ್ಟ್ 1798 ರಂದು ಸಂಗೊಳ್ಳಿ ಗ್ರಾಮದಲ್ಲಿ ರಾಯಣ್ಣ ಜನಿಸಿದ ತಂದೆ ಭರಮಣ್ಣ ತಾಯಿ ಕೆಂಚವ್ವ ತಂದೆ ವಾಲಿಕಾರ ವೃತ್ತಿಯನ್ನು ಮಾಡುತ್ತಿದ್ದ. ರಾಯಣ್ಣ ಚಿಕ್ಕವನಿದ್ದಾಗಲೇ ಯುದ್ಧದ ತರಬೇತಿ ಪಡೆದಿದ್ದ. ಕಿತ್ತೂರು ನಾಡಿನಲ್ಲೆಲ್ಲ ಸಂಚರಿಸಿ ತನ್ನ ಸೈನ್ಯವನ್ನು ಕಟ್ಟಿದ್ದ. ಥ್ಯಾಕರೆ ನಿಧನದ ನಂತರ ಚಾಪ್ಲೆ ಆಡಳಿತ ಒಮ್ಮೆ ಬ್ರಿಟೀಷರು ಕಿತ್ತೂ–ರಿನ ಮೇಲೆ ದಂಡೆತ್ತಿ ಬಂದರು ರಾಯಣ್ಣ ಕಿತ್ತೂ–ರಿನ ಹುಲಿಯಾಗಿ ಕನ್ನಡದ ಕಲಿಯಾಗಿ ಹೋರಾಡಿದ.

ಬ್ರಿಟೀಷರ ಕೈವಶವಾಗಿದ್ದ ಕಿತ್ತೂರು ಪ್ರಾಂತವನ್ನು ಪುನ: ಸ್ವತಂತ್ರಗೊಳಿಸುವುದರಿಂದ ರಾಯಣ್ಣನಿಗೆ ವೈಯಕ್ತಿಕ ಲಾಭವೂ ಆಗುತ್ತಿರಲಿಲ್ಲ. ರಾಜನಾಗಿ ಸಿಂಹಾಸನವೇರುವ, ಮಂತ್ರಿಯಾಗಿ ಅಧಿಕಾರ ಗಿಟ್ಟಿಸಿಕೊಳ್ಳುವ ಆಸೆಯಾಗಲೀ, ಕಿಂ–ಚಿತ್ತೂ ಇರಲಿಲ್ಲ. ರಾಣಿ ಚೆನ್ನಮ್ಮನ ಬಂಧನವಾದಾಗ ಅವಳ ಜೊತೆಯಲ್ಲಿ ಬಂಧಿಸಲ್ಪಟ್ಟ ಹಲವಾರು ಸಾಮಾನ್ಯ ಸೈನಿಕರಲ್ಲಿ ರಾಯಣ್ಣನೂ ಒಬ್ಬನಾಗಿದ್ದ. ರಾಣಿ ಚೆನ್ನಮ್ಮನನ್ನು ಹೊರತುಪಡಿಸಿ ಕ್ಷಮಿಸಿ ಬಿಡುಗಡೆಗೊಳಿಸಲ್ಪಟ್ಟ ಗುಂಪಿನಲ್ಲಿ ರಾಯಣ್ಣನೂ ಸೇರಿದ್ದ.

ಸೆರೆಮನೆಯಿಂದ ಹೊರಬಂದ ಮೇಲೆ ಎಲ್ಲರಂತೆ ತನ್ನೂರಿಗೆ ಹೋಗಿ ಮಾಮೂಲಿ ವೃತ್ತಿಯಲ್ಲಿ ಸೇರದೆ, ಮುದ್ದಿನ ಮಡದಿ, ಮಗನನ್ನು ಹಾಗೂ ಹೆತ್ತ ತಂದೆ ತಾಯಿಯಗಳಿಂದ ದೂರಾಗಿ ಕಿತ್ತೂರನ್ನು ಸ್ವತಂತ್ರ್ಯಗೊಳಿಸುವ ಪಣತೊಟ್ಟು ಹಗಲು ರಾತ್ರಿಯೆನ್ನದೆ ಕಾಡು ಮೇಡು ಸುತ್ತಿ ಸಾವಿರಾರು ಸೈನಿಕರ ಡಂಡುಕಟ್ಟಿದ. ತನ್ನ ಯುಕ್ತಿ ಹಾಗೂ ಶಕ್ತಿಯಿಂದ ಯುದ್ದ ತಂತ್ರಗಾರಿಕೆಯಿಂದ ತಂತ್ರಗಾರಿಕೆಯಿಂದ ಸರ್ವರೀತಿಯಲ್ಲೂ ಸಜ್ಜಾಗಿದ್ದ ಬ್ರಿಟೀಷರ್ ಸೈನ್ಯವನ್ನು ತತ್ತರಿಸುವಂತೆ ಮಾಡಿದ.



ರಾಜ ಮಹಾರಾಜರನ್ನು ಮಣ್ಣುಮುಕ್ಕಿಸಿದ. ಇನ್ನೇನು ಗೆಲವು ನಿಶ್ಚಿತ ಎನ್ನುವ ಸಮಯದಲ್ಲೇ ದೇಶದ್ರೋಹಿ, ಹಿತಶತೃವಿನ ಕುತಂತ್ರಕ್ಕೆ ಬಲಿಯಾದ ನಿರಾಯುಧನಾಗಿ ಸ್ನಾನ ಮಾಡುವಾಗ ಬ್ರಿಟೀಷರ ಬಂಧಿಯಾದ.

ಬ್ರಿಟೀಷ ಸರಕಾರದ ಮುಂದೆ ತಲೆ ತಗ್ಗಿಸದೇ ತಾನು ಮಾಡಿದ್ದು ಸರಿಯಾಗಿದೆ, ಎಂದು ಹೆದರದೆ ಧೈರ್ಯದಿಂದ ಹೇಳಿದ. ಮೋಸಗಾರ ಬ್ರಿಟೀಷರ ನ್ಯಾಯದ ತಕ್ಕಡಿಯಲ್ಲಿ ರಾಯಣ್ಣನಿಗೆ ನ್ಯಾಯ ಸಿಗುವುದಾದರು ಹೇಗೆ? ದೇಶಪ್ರೇಮವನ್ನರಿಯದ ಬ್ರಿಟೀಷರು ನ್ಯಾಯ ನಿಡುವ ನೆಪದಲ್ಲಿ ಸಮಯ ಕಳೆದು ಕೊನೆಗೊಂದು ದಿನ ಮರಣದಂಡನೆ ವಿಧಿಸಿದರು. ಆ ಸಮಯದಲ್ಲೂ ರಾಯಣ್ಣ ಹೆದರದೆ ಆ ನ್ಯಾಯವನ್ನು ಸ್ವೀಕರಿಸಿದ.

ಮರಣ ದಂಡನೆಯಿಂದ ಗಲ್ಲಿಗೇರುವ ಮುನ್ನ ನಿನ್ನ ಕೊನೆಯ ಆಶೆ ಏನು ಎಂದು ಬ್ರಿಟೀಷ ಅಧಿಕಾರಿಗಳು ಕೇಳಿದಾಗ ರಾಯಣ್ಣ ತನ್ನ ಮಡದಿ ಮಕ್ಕಳು ಬಂಧು ಬಳಗದ ಬಗ್ಗೆ ಕೇಳಲಿಲ್ಲ ಬದಲಾಗಿ ನಂದಗಡ ಸುತ್ತಲಿನ ಜನ ನನಗೆ ಬಹಳ ಸಹಾಯ ಮಾಡಿದ್ದಾರೆ ಆದ್ದ–ರಿಂದ ಆ ಗ್ರಾಮದ ಸೀಮೆಯಲ್ಲಿ ಆ ಜನರ ಮುಂದೆಯೇ ನನ್ನನ್ನು ಗಲ್ಲಿಗೇರಿಸಿ ಎಂದು ಕೇಳಿದ. ಇನ್ನೊಂದು ಜನ್ಮ ಎನ್ನುವು ಇದ್ದರೆ ಪುನ: ನನಗೆ ಕನ್ನಡಮ್ಮನ ಮಗನಾಗಿ ಜನಿಸಿ ಬ್ರಿಟೀಷರ ವಿರುದ್ಧ ಹೋರಾಡಿ ಸ್ವಾತಂತ್ರ ?ಯವನ್ನು ತಂದು ಕೊಡಲು ಹೋರಾಡುವೆನೆಂದು ಹೇಳಿದ ಮಹಾ ಪರಾಕ್ರಮಿ. ಮೋಸದಿಂದ ಸೆರೆ ಹಿಡಿದಿದ್ದ ರಾಯಣ್ಣನನ್ನು 26 ನೇ ಜನೆವರಿ 1831 ರಂದು ನಂದಗಡದಲ್ಲಿ ಗಲ್ಲಿಗೇರಿಸಿದರು.

ಅಂದು ಅವನ ಸಮಾಧಿಯ ಮೇಲೆ ನೆನಪಾರ್ಥವಾಗಿ ನೆಟ್ಟ ಪುಟ್ಟ ಆಲದ ಮರವೊಂದು ಮುಂದೆ ರಾಯಣ್ಣನ ಕೀರ್ತಿಯಂತೆಯೇ ಬೃಹದಾಕಾರವಾಗಿ ಬೆಳೆಯಿತು. ಇತಿಹಾಸದ ಪುಟದಲ್ಲಿ ಸ್ಥಾನಗಿಟ್ಟಿಸಿಕೊಂಡಿತು. ಇಂದಿಗೂ ಕೂಡ ಮಕ್ಕಳಾಗದ ಅದೆಷ್ಟೋ ದಂಪತಿಗಳು ಅಲ್ಲಿಗೆ ಹೋಗುತ್ತಾರೆ. ಅದೇ ಆಲದ ಮರಕ್ಕೆ ತೊಟ್ಟಿಲು ಕಟ್ಟಿ ರಾಯಣ್ಣ ನಮಗೆ ನಿನ್ನಂತಹ ಒಬ್ಬ ವೀರ ಮಗನನ್ನು ಕರುಣಿಸು ಎಂದು ಹರಕೆ ಹೊತ್ತುಕೊಳ್ಳುತ್ತಾರೆ. ಇತ್ತೀಚೆಗೆ ಸರಕಾರದಿಂದ ಎರಡು ಎಕರೆ ಜಮೀನು ಪಡೆದು ಒಂದು ಸಂದರವಾದ ತೋಟವನ್ನು ನಿರ್ಮಿಸಿ ಅದಕ್ಕೆ ರಾಯಣ್ಣನ ತೋಟವೆಂದು ಹೆಸರಿಟ್ಟಿದ್ದಾರೆ. ನಿಸ್ವಾರ್ಥವಾಗಿ ನಾಡಿಗಾಗಿ ದುಡಿದ, ಮಡಿದ, ಒಬ್ಬ ಯೋಧನಿಗೆ ಇದಕ್ಕಿಂತ ಇನ್ನೇನು ತಾನೇ ಬೇಕು.

ಬೀರಪ್ಪ ಶಂಭೋಜಿ
ಗೌರವಾಧ್ಯಕ್ಷರು ಜಿಲ್ಲಾ ಚುಸಾಪ
(ಕನ್ನಡದ ವೀರ, ಧೀರ, ಶೂರ ಅಪ್ರತಿಮ ಸ್ವಾತಂತ್ರ್ಯ ಹೋರಾಟಗಾರ ಸಂಗೊಳ್ಳಿ ರಾಯಣ್ಣ ಜನಿಸಿದ ದಿವಸ ಆಗಷ್ಟ್ 15 ರಂದು ಭಾರತ ಸ್ವಾತ್ರಂತ್ರ್ಯ ಹೊಂದಿತು ಸಂಗೊಳ್ಳಿ ರಾಯಣ್ಣನ ಕುರಿತು ಸಂಕ್ಷಿಪ್ತ ಲೇಖನ)

## ವಚನ ದರ್ಶನ

ಪಾವನನಾದೆನು ಬಸವಣ್ಣಾ ನಿಮ್ಮ ಪಾವನಮೂರ್ತಿಯ ಕಂಡು,ಪರತತ್ವವನೈದಿದೆ ಬಸವಣ್ಣಾ ನಿಮ್ಮ ಪರಮ ಸೀಮೆಯ ಕಂಡು,ಪದನಾಲ್ಕು ಮೀರಿದೆ ಬಸವಣ್ಣಾ ನಿಮ್ಮ ಪರುಷಪಾದವ ಕಂಡು,ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ, ನಿಮ್ಮ ಶರಣ ಬಸವಣ್ಣನ ಪ್ರಸಾದದಿಂದ ನಾನು ಬದುಕಿದೆನು ಕಾಣಾ

ಪಾವನಾದೆನು ಎನ್ನುವ ವಚನದಗಳ ಹಿನ್ನಲೆ ನೋಡಿದರೆ ಅದಕ್ಕೆ ಅದ್ಬುತ ಅರ್ಥವಿದೆ ಎನ್ನಬಹುದು. ಕನ್ನಡದ ಸಾಹಿತ್ಯದ ಪ್ರಮುಖ ಪ್ರಕಾರಗಳಲ್ಲಿ ಒಂದು. ೧೧ನೇ ಶತಮಾನದ ಉತ್ತರಾರ್ಧದಲ್ಲಿ ಉದಯಿಸಿ ೧೨ನೇ ಶತಮಾನದ ಕಡೆಯವರೆಗೂ ಬಸವಣ್ಣನವರ–ಜನಸಾಮಾನ್ಯರ ಆಂದೋಲನದ ಭಾಗವಾಗಿ ಬೆಳೆದು ಬಂತು. ಇದು ಸಾಹಿತ್ಯ ಪರಿಭಾಷೆಯ ಒಂದು ವಿಶಿಷ್ಟ ಸಾಹಿತ್ಯ ಪ್ರಕಾರದ ಕಾವ್ಯ. ಹಾಡಿದರೆ ಹಾಡಾಗುವ, ಓದಿದರೆ ಗದ್ಯವಾಗುವ ಕನ್ನಡದ ವಿಶೇಷ ಕಾವ್ಯ ಪ್ರಕಾರ. ವಚನ ಸಾಹಿತ್ಯವು ತನ್ನ ಕಾಲದಲ್ಲಿನ ಜನರ ಮನೋಭಿವ್ಯಕ್ತಿಗೆ ಸಂಗಾತಿಯಾಯಿತು.ವಚನ ಎಂದರೆ 'ಪ್ರಮಾಣ', 'ಕೊಟ್ಟ ಮಾತು' ಎಂದರ್ಥ.

ಪಾವನನಾದೆನು ಬಸವಣ್ಣಾ ನಿಮ್ಮ ಪಾವನಮೂರ್ತಿಯ ಕಂಡುಎಂಬುದು ೧೨ನೇ ಶತಮಾನದ ಪ್ರಸಿದ್ಧ ಶಿವಶರಣರಾದ ಶಿವಯೋಗಿ ಸಿದ್ದರಾಮೇಶ್ವರರು ಬಸವಣ್ಣನವರ ಮಹಿಮೆಯನ್ನು ಕೊಂಡಾಡುತ್ತಾ ರಚಿಸಿರುವ ಅತ್ಯಂತ ಸುಂದರವಾದ ಮತ್ತು ಭಕ್ತಿಪೂರ್ವಕವಾದ ವಚನವಾಗಿದೆ. ಬಸವಣ್ಣನವರ ದರ್ಶನ ಹಾಗೂ ಅವರ ಗುಣಗಳಿಂದ ತಮ್ಮ ಜೀವನ ಹೇಗೆ ಪಾವನವಾಯಿತು ಎಂಬುದನ್ನು ಸಿದ್ದರಾಮೇಶ್ವರರು ಈ ವಚನದಲ್ಲಿ ಅತ್ಯಂತ ಮಾರ್ಮಿಕವಾಗಿ ವಿವರಿಸಿದ್ದಾರೆ.

ಗುರು ಮತ್ತು ಲಿಂಗ. ಬಸವಣ್ಣನೇ ನನಗೆ ಗುರು ಹಾಗೂ ಲಿಂಗ ಸ್ವರೂಪಿಯಾಗಿದ್ದಾರೆ.ಪಾವನ ಮೂರ್ತಿ ಬಸವಣ್ಣನವರ ಪವಿತ್ರ ದರ್ಶನದಿಂದ ಜೀವನವು ಧನ್ಯವಾಯಿತು. ವಿಶ್ವಗುರು ಬಸವಣ್ಣನೇ ಸರ್ವಸ್ವ ಎಂದು ಕೊಂಡಾಡಿದ್ದಾರೆ. ನಾವು ನೀವು ಬಸವಾದಿ ಶಿವಶರಣ–ರ ದಾರ್ಶನಿಕರ ಮಹಾತ್ಮರ ಹಾಕಿಕೊಟ್ಟ ಹಾದಿಯಲ್ಲಿ ಜ್ಞಾನ ಮಾರ್ಗದರ್ಶನ ಮಾಡೋಣ ಸರ್ವರಿಗೂ ಶರಣು ಶರಣಾರ್ಥಿಗಳು.

ಪಂಪಯ್ಯಸ್ವಾಮಿ ಸಾಲಿಮಠ ಅಂತರಗಂಗಿ
ಸಿಂಧನೂರು. 9980094144

1ನೇ ಪುಟದಿಂದ....

ಅವರನ್ನು ವಿಧಾನಸಭೆಯ ನೂತನ ಸಭಾಧ್ಯಕ್ಷರನ್ನಾಗಿ ಆಯ್ಕೆ ಮಾಡುವ ಪ್ರಸ್ತಾವವನ್ನು ಮಂಡಿಸಿದರು. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ರವರ ಪ್ರಸ್ತಾವವನ್ನು ಉಪಮುಖ್ಯಮಂತ್ರಿ ಡಾ.ಜಿ. ಪರಮೇಶ್ವರ್ ಅನುಮೋದಿಸಿದರು. ಈ ಪ್ರಸ್ತಾಪಕ್ಕೆ ಸದನ ಧ್ವನಿಮತದಿಂದ ಒಪ್ಪಿಗೆ ನೀಡಿತು. ಹಂಗಾಮಿ ಸಭಾಧ್ಯಕ್ಷ ಟಿ.ಬಿ. ಜಯಚಂದ್ರ ಅವರು ಗುರುಪಾದ ಗೌಡ ಸಂಗನಗೌಡ ಪಾಟೀಲ್ ಅವರು ನೂತನ ಸಭಾಧ್ಯಕ್ಷರಾಗಿ ಸರ್ವಾನುಮತದಿಂದ ಆಯ್ಕೆಯಾಗಿದ್ದಾರೆ ಎಂದು ಘೋಷಿಸಿದರು. ಇದಾದ ಬಳಿಕ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಪ್ರತಿಪಕ್ಷ ನಾಯಕ ಆರ್. ಅಶೋಕ್ ಇಬ್ಬರೂ ಗುರುಪಾದ ಗೌಡ ಸಂಗನಗೌಡ ಪಾಟೀಲ್ ಅವರು ಕುಳಿತ್ತಿದ್ದ ಆಸನದತ್ತ ತೆರಳಿ ಅವರನ್ನು ಕೈಹಿಡಿದು ವಿಧಾನಸಭಾಧ್ಯಕ್ಷರ ಪೀಠಕ್ಕೆ ಕರೆತಂದು ಕುಳ್ಳಿ–ರಿಸಿದರು. ಆಗ ಇಡೀ ಸದನ ಮೇಜು ಕುಟ್ಟಿ ಹರ್ಷ ವ್ಯಕ್ತಪಡಿಸಿತು.

**ಬಿಜೆಪಿ ಬಹಿಷ್ಕಾರ :** ಸಾಂವಿಧಾನಿಕ ಹುದ್ದೆಯಾದ ಸಭಾಧ್ಯಕ್ಷ ಸ್ಥಾನಕ್ಕೆ ಕಾಂಗ್ರೆಸ್ ಹೈಕಮಾಂಡ್ ಹೆಸರು ಅಂತಿಮಗೊಳಿಸಿ ಪಟ್ಟಿ ಕಳುಹಿಸಿರುವುದನ್ನು ವಿರೋಧಿಸಿ ಬಿಜೆಪಿ ಮತ್ತು ಜೆಡಿಎಸ್ ನೂತನ ಸಭಾಧ್ಯಕ್ಷರ ಆಯ್ಕೆ ಪ್ರಕ್ರಿಯೆಯನ್ನು ಬಹಿಷ್ಕರಿಸಿತ್ತು. ಹಾಗಾಗಿ ನೂತನ ಸಭಾಧ್ಯಕ್ಷರ ಆಯ್ಕೆ ಸಂದರ್ಭದಲ್ಲಿ ಬಿಜೆಪಿ ಜೆಡಿಎಸ್ ಸದಸ್ಯರು ಸದನಕ್ಕೆ ಗೈರುಹಾಜರಾಗಿದ್ದರು. ಜಿ.ಎಸ್. ಪಾಟೀಲ್ ಆಯ್ಕೆ ಘೋಷಣೆಯಾಗುತ್ತಿದ್ದಂತೆಯೇ ಬಿಜೆಪಿ ಮತ್ತು ಜೆಡಿಎಸ್ ಸದಸ್ಯರು ಸದನಕ್ಕೆ ಆಗಮಿಸಿದರು. ನಂತರ ಪ್ರತಿಪಕ್ಷ ನಾಯಕ ಆರ್, ಅಶೋಕ್ ಹಾಗೂ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಆಸನದಿಂದ ಕರೆತಂದು ಸಭಾಧ್ಯಕ್ಷರ ಪೀಠದಲ್ಲಿ ಕುಳ್ಳಿರಿಸಿದರು. ನೂತನ ಸಭಾಧ್ಯಕ್ಷರಾಗಿ ಜಿ.ಎಸ್. ಪಾಟೀಲ್ ಅವರ ಪೀಠದಲ್ಲಿ ಆಸೀನರಾದ ನಂತರ ಅವರನ್ನು ಅಭಿನಂದಿಸಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಪ್ರತಿಪಕ್ಷ ನಾಯಕ ಆರ್. ಅಶೋಕ್, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸುರೇಶ್‌ಬಾಬು, ಉಪಮುಖ್ಯಮಂತ್ರಿ ಡಾ.ಜಿ. ಪರಮೇಶ್ವರ್, ಮಾಜಿ ಸಚಿವ ಹೆಚ್.ಕೆ.ಪಾಟೀಲ್, ಬಿಜೆಪಿಯ ಸಿ.ಸಿ. ಪಾಟೀಲ್, ಸಚಿವ ಯು.ಟಿ. ಖಾದರ್, ಬಿಜೆಪಿಯ ಸುನೀಲ್‌ಕುಮಾರ್, ಬಿ.ವೈ. ವಿಜಯೇಂದ್ರ ಸಚಿವ ಕೆ.ಎಚ್. ಮುನಿಯಪ್ಪ ಸೇರಿದಂತೆ ಹಲವು ಸದಸ್ಯರು ಅಭಿನಂದನಾ ಭಾಷಣ ಮಾಡಿದರು.

**ಮೇಲ್ಮನೆ ಸಭಾಪತಿಯಾಗಿ ಸಲೀಂ ಅಹ್ಮದ್ ಆಯ್ಕೆ :** ವಿಧಾನ ಪರಿಷತ್ತಿನ ನೂತನ ಸಭಾಪತಿಯಾಗಿ ಕಾಂಗ್ರೆಸ್ ಮುಖಂಡ ಹಿರಿಯ ಸದಸ್ಯ ಸಲೀಂ ಅಹ್ಮದ್ ಅವರು 8 ಮತಗಳ ಅಂತರದಿಂದ ಆಯ್ಕೆಯಾಗಿದ್ದಾರೆ. ವಿಧಾನ ಪರಿಷತ್ತಿನ ಸಭಾಪತಿ ಸ್ಥಾನಕ್ಕೆ ಇಂದು ನಡೆದ ಚುನಾವಣೆಯಲ್ಲಿ ಸಲೀಂ ಅಹ್ಮದ್ ಪರ 38 ಮತಗಳು ಚಲಾವಣೆಯಾದರೆ ಅವರ ಪ್ರತಿ ಸ್ಪರ್ಧಿ ಬಿಜೆಪಿಯ ಹಿರಿಯ ಪಿ.ಹೆಚ್.ಪೂಜಾರ್ ವಿರುದ್ಧ 30 ಮತಗಳು ಚಲಾವಣೆಯಾಗಿದ್ದರಿಂದ ಸಲೀಂ ಅಹಮದ್ ಆಯ್ಕೆಯಾಗಿದ್ದಾರೆ ಎಂದು ಹಂಗಾಮಿ ಸಭಾಪತಿ ಪುಟ್ಟಣ್ಣ ಪ್ರಕಟಿಸಿದರು. ಇದಕ್ಕೂ ಮೊದಲು ಪೀಠ ದಲ್ಲಿದ್ದ ಹಂಗಾಮಿ ಸಭಾಪತಿ ಪುಟ್ಟಣ್ಣ ಅವರು ಸಭಾಪತಿ ಸ್ಥಾನಕ್ಕೆ ಪ್ರಕ್ರಿಯೆ ಕೈಗೊಂಡಾಗ ಸದಸ್ಯ ಬಿ.ಕೆ. ಹರಿಪ್ರಸಾದ್ ಅವರು ಸಲೀಂ ಅಹ್ಮದ್ ಅವರನ್ನು ವಿಧಾನ ಪರಿಷತ್ತಿನ ಸಭಾಪತಿಯವರನ್ನಾಗಿ ಚುನಾಯಿಸಬೇಕೆಂದು ಸೂಚಿಸಿದರು. ಸಭಾನಾಯಕ ಡಾ.ಯತೀಂದ್ರಸಿದ್ದರಾಮಯ್ಯಪ್ರಸ್ತಾವವ 'ನ್ನು ಅನುಮೋದಿಸಿದ= 'ರು. ಅದೇ ರೀತಿ, ಎನ್.ಎಸ್.ಬೋಸರಾಜು, ಮಂಜುನಾಥ ಭಂಡಾರಿ, ಎ.ನಾಗರಾಜು ಯಾದವ್, ಐವಾನ್ ಡಿಸೋಜಾ ಅವರ ಸಹ ಸಲೀಂ ಅಹ್ಮದ್ ಅವರನ್ನು ವಿಧಾನ ಪರಿಷತ್ತಿನ ಸಭಾಪತಿಯವರನ್ನಾಗಿ ಚುನಾಯಿಸಬೇಕೆಂದು ಸೂಚಿಸಿದರು. ಬಳಿಕ, ವಿನಯ್ ಕಾರ್ತಿಕ್ ಪ್ರಕಾಶ್, ವಸಂತ ಕುಮಾರ್, ಡಾ.ಡಿ.ತಿಮ್ಮಯ್ಯ, ಎಫ್.ಹೆಚ್.ಜಕ್ಕಪ್ಪ ನವರ್ ಅವರು ಪ್ರಸ್ತಾಪ ಅನುಮೋದಿಸಿದರು.ಇತ್ತ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು ಪಿ.ಹೆಚ್ ಪೂಜಾರ್ ಅವರನ್ನು ವಿಧಾನ ಪರಿಷತ್ತಿನ ಸಭಾಪತಿಯವರನ್ನಾಗಿ ಚುನಾಯಿಸಬೇಕೆಂದು ಸೂಚಿಸಿದರು. ಇದಕ್ಕೆ ಜೆಡಿಎಸ್ ಸದಸ್ಯ ಎಸ್.ಎಲ್.ಭೋಜೇಗೌಡ ಪ್ರಸ್ತಾಪವನ್ನು ಅನುಮೋದಿಸಿದರು.

# ಮಸ್ಕಿಯಲ್ಲಿ ರಾಷ್ಟ್ರೀಯ ಗ್ರಂಥಪಾಲಕರ ದಿನಾಚರಣೆ

### ಗ್ರಂಥಾಲಯ ಕೇವಲ ಪುಸ್ತಕಗಳ ಸಂಗ್ರಹಣಾ ಸ್ಥಳವಲ್ಲ; ಜ್ಞಾನ, ಕಲಿಕೆ, ಸಂಶೋಧನೆ ಮಾಹಿತಿ ವಿನಿಮಯದ ಪ್ರಮುಖ ಕೇಂದ್ರ–ಡಾ. ಮಹಾಂತಗೌಡ ಪಾಟೀಲ

ನೈಜ್ಯ ದೆಸೆ ನ್ಯೂಸ್

ಮಸ್ಕಿ: ವಿದ್ಯಾರ್ಥಿಗಳ ಶೈಕ್ಷಣಿಕ, ಬೌದ್ಧಿಕ ಹಾಗೂ ಸಂಶೋಧನಾ ಬೆಳವಣಿಗೆಯಲ್ಲಿ ಗ್ರಂಥಾಲಯದ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಗ್ರಂಥಾಲಯ ಕೇವಲ ಪುಸ್ತಕಗಳ ಸಂಗ್ರಹಣಾ ಸ್ಥಳವಲ್ಲ; ಜ್ಞಾನ, ಕಲಿಕೆ, ಸಂಶೋಧನೆ ಹಾಗೂ ಮಾಹಿತಿ ವಿನಿಮಯದ ಪ್ರಮುಖ ಕೇಂದ್ರವಾಗಿದೆ ಎಂದು ದೇವನಾಂಪ್ರಿಯ ಅಶೋಕ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು ಸ್ನಾತಕೋತ್ತರ ಕೇಂದ್ರದ ಪ್ರಾಂಶುಪಾಲ ಡಾ. ಮಹಾಂತಗೌಡ ಪಾಟೀಲ ಹೇಳಿದರು.

ಪಟ್ಟಣದ ದೇವನಾಂಪ್ರಿಯ ಅಶೋಕ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು ಸ್ನಾತಕೋತ್ತರ ಕಾಲೇಜಿನ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರದ ವತಿಯಿಂದ ಭಾರತದ ಗ್ರಂಥ–ಾಲಯ ಹಾಗೂ ಮಾಹಿತಿ ವಿಜ್ಞಾನದ ಪಿತಾಮಹ ಪದ್ಮಶ್ರೀ ಡಾ. ಎಸ್.ಆರ್. ರಂಗನಾಥನ್ ಅವರ ಜನ್ಮದಿನದ ಅಂಗವಾಗಿ ಹಮ್ಮಿಕೊಂಡಿದ್ದ ರಾಷ್ಟ್ರೀಯ



ಗ್ರಂಥಪಾಲಕರ ದಿನಾಚರಣೆ ಉದ್ಘಾಟಿಸಿ ಅವರು ಮಾತನಾಡಿದರು.

ರಂಗನಾಥನ್ ಅವರ ಕೊಡುಗೆ ಸ್ಮರಣೆ: ಕಾಲೇಜಿನ ಗ್ರಂಥಪಾಲಕ ಡಾ. ಪರಮಾನಂದ ಜೆ. ಹಂಗರಗಿ ಅವರು ಡಾ. ಎಸ್.ಆರ್. ರಂಗನಾಥನ್ ಅವರ ಜೀವನ, ಸಾಧನೆ ಹಾಗೂ ಗ್ರಂಥಾಲಯ ವಿಜ್ಞಾನ ಕ್ಷೇತ್ರಕ್ಕೆ ನೀಡಿದ ಕೊಡುಗೆಗಳ ಕುರಿತು ವಿಶೇಷ ಉಪನ್ಯಾಸ ನೀಡಿದರು. ಭಾರತದಲ್ಲಿ ಆಧ–ುನಿಕ ಗ್ರಂಥಾಲಯ ಚಳವಳಿಗೆ ರಂಗನಾಥನ್ ಅವರು ಭದ್ರ ಬುನಾದಿ ಹಾಕಿದ್ದಾರೆ ಎಂದರು. ರಂಗನಾಥನ್ ಅವರ ಗ್ರಂಥಾಲಯ ವಿಜ್ಞಾನದ ಪಂಚಸೂತ್ರಗಳಾದ 'ಪುಸ್ತಕಗಳು ಬಳಕೆಗಾಗಿ', 'ಪ್ರತಿಯೊಬ್ಬ ಓದುಗನಿಗೂ ಅವನ/ಅವಳ ಪುಸ್ತಕ', 'ಪ್ರತಿಯೊಂದು ಪುಸ್ತಕಕ್ಕೂ ಅದರ ಓದುಗ', 'ಓದುಗನ ಸಮಯವನ್ನು ಉಳಿಸಿ' ಹಾಗೂ 'ಗ್ರಂಥಾಲಯವು ಬೆಳೆಯುತ್ತಿರುವ ಜೀವಿಯಾಗಿದೆ' ಎಂಬ ತತ್ತ್ವಗಳ ಮಹತ್ವವನ್ನು ವಿವರಿಸಿದರು. ಡಿಜಿಟಲ್ ಯುಗದಲ್ಲಿಯೂ ಈ ತತ್ತ್ವಗಳು ಪ್ರಸ್ತುತವಾಗಿವೆ ಎಂದು ತಿಳಿಸಿದರು. ವಿದ್ಯಾರ್ಥಿಗಳು ಪ್ರತಿನಿತ್ಯ ಗ್ರಂಥಾಲಯಕ್ಕೆ ಭೇಟಿ ನೀಡಿ ಪುಸ್ತಕಗಳು, ಪತ್ರಿಕೆಗಳು, ನಿಯತಕಾಲಿಕೆಗಳು ಹಾಗೂ ವಿವಿಧ ಮಾಹಿತಿ ಸಂಪನ್ಮೂಲಗಳನ್ನು ಬಳಸಿಕೊಳ್ಳುವ ಮೂಲಕ ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು ಎಂದು ಕರೆ ನೀಡಲಾಯಿತು. ಕಾರ್ಯಕ್ರಮದಲ್ಲಿ ಕಾಲೇಜಿನ ಡಾ.ಬಸವರಾಜ್ ತಡಕಲ, ಶ್ರೀನಿವಾಸ್, ಸಣ್ಣಪ್ಪ ನಾಯಕ, ಹಾಜಿಬಾಬು,ಡಾ.ರಾಜೀಯಾ ಬೇಗಂ, ಆಶಾ ಸಿ, ಗಿರಿಜಾ, ಡಾ.ವೀರಪ್ಪನಗೌಡ ಡಾ.ಪಂಪಾಪತಿ ನಾಯಕ,
ಸಂಜು ನಾಯಕ,ಶರಣಬಸವ, ಗೋವಿಂದ ರೆಡ್ಡಿ, ರವಿ. ಡಾ.ವೀರೇಶ. ವೀರೇಶ, ರಮೇಶ್ ನಾಯಕ ಸೇರಿದಂತೆ ಬೋಧಕ, ಬೋಧಕೇತರ ಸಿಬ್ಬಂದಿ, ಗ್ರಂಥಾಲಯ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು

# ಭಾರತದ ಸ್ವಾತಂತ್ರ್ಯ ಚಳಿವಳಿ ನೆನಪುಗಳು..!

ನೈಜ್ಯ ದೆಸೆ ವಿಶೇಷ



1947ನೇ ಆಗಸ್ಟ್ 15 ರಂದು ಭಾರದ ದೇಶ ಸ್ವಾತಂತ್ರ್ಯ ಪಡೆಯಿತು ಬಂಧಿಯಾಗಿದ್ದ ಭಾರತ ಮಾತೆಯು ದಾಸ್ಯದಿಂದ ಬಿಡುಗಡೆಯಾದ ದಿನ 1947 ಆಗಸ್ಟ್ 14 ರ ಮಧ್ಯರಾತ್ರಿ ಜವಾಹರ್ ಲಾಲ್ ನೆಹರೂ ಅವರು ಭಾರತೀಯ ರಾಜ್ಯಾಂಗವನ್ನು ಕುರಿತು ಭವಿಷ್ಯದೊಂದಿಗೆ ಅನುಸಂದಾನ ಎನ್ನುವ ತಮ್ಮ ಐತಿಹಾಸಿಕ ಭಾಷಣದಲ್ಲಿ ಮಧ್ಯರಾತ್ರಿಯ ಗಂಟೆ ಬಾರಿಸುತ್ತಲೇ ಜಗತ್ತು ನಿದ್ರಿಸುತ್ತಿರುವ ವೇಳೆಯಲ್ಲಿ ಭಾರತ ಎಚ್ಚತ್ತು ಜೀವ ತಳೆಯುತ್ತದೆ ಸ್ವತಂತ್ರವಾಗುತ್ತದೆ ಇತಿಹಾಸದಲ್ಲಿ ಎಂದಾದರೂ ಒಮ್ಮೆ ಬರುವ ಮಹತ್ವದ ಘಳಿಗೆಯೊಂದುಂಟು ಅಂತಹ ಘಳಿಗೆಯಲ್ಲಿ ಹಳತಿನಿಂದ ಹೊಸತಿಗೆ ನಾವು ಪಾದಾರ್ಪಣೆ ಮಾಡುತ್ತೇವೆ ಒಂದು ಯುಗ ಮುಕ್ತಾಯವಾಗುತ್ತದೆ ದೀರ್ಘಕಾಲದಿಂದ ಅದುಮಿ ಹಿಡಿಯಲ್ಪಟ್ಟ ರಾಷ್ಟ್ರವೊಂದರ ಚೇತನ ನುಡಿಯ ತೊಡಗುತ್ತದೆ ಎಂದು ಹೇಳಿದ ಮಾತು ಇಂದಿಗೂ ಅನುರಣಿಸುತ್ತಿದೆ.

ದೇಶದ ಸ್ವಾತಂತ್ರ್ಯಕ್ಕಾಗಿ ಅನೇಕ ಹೋರಾಟಗಳು ನಡೆದವು ಮಹಾತ್ಮ ಗಾಂಧೀ–ಜಿಯವರು ಕೊಟ್ಟ ಸ್ವಾತಂತ್ರ್ಯ ಹೋರಾಟದ ಕೊನೆಯ ಕರೆ ಬ್ರಿಟಿಷರೇ ಭಾರತ ಬಿಟ್ಟು ತೊಲಗಿ ಮಾಡು ಇಲ್ಲವೇ ಮಡಿಯಿರಿ
ಈ ಸ್ವಾತಂತ್ರ್ಯ ಕಹಳೆಯ ಕರೆ ದೇಶದಲ್ಲೇ ದೊಡ್ಡ ಆಂದೋಲನಕ್ಕೆ ಕಾರಣವಾಯಿತು. ಸುಂಟರಗಾಳಿ ಬೀಸಿತು. ದೊಡ್ಡ ಸಂಗ್ರಾಮವೇ ನಡೆಯಿತು. ಸ್ವಾತಂತ್ರ್ಯಕ್ಕಾಗಿ ದುಡಿದವರು, ಮಡಿದವರು, ಲಕ್ಷಾಂತರ ಮಂದಿ. ಅವರ ಹೋರಾಟದ ಫಲವೇ ಸ್ವಾತಂತ್ರ್ಯ ಈ ಸ್ವಾತಂತ್ರ್ಯ ಬರುವುದಕ್ಕೆ ಮುಂಚೆ ನಮ್ಮ ದೇಶದ ಪರಿಸ್ಥಿತಿಯ ಒಂದು ಇಣುಕು ನೋಟ ಹಾಕೋಣ.

ಭಾರತ ದೇಶ 18ನೇ ಶತಮಾನದ ಪ್ರಾರಂಭದಲ್ಲಿ ರಾಜ ಮಹಾರಾಜರ ನವಾಬರ ಒಳಜಗಳದಿಂದ ಛಿದ್ರ ಛಿದ್ರವಾಗಿ ಯುದ್ಧಗಳು ನಡೆಯತ್ತಲೇ ಇದ್ದವು ಬ್ರಿಟಿಷರ ಈಸ್ಟ್ ಇಂಡಿಯಾ ಕಂಪನಿಯವರು ಆ ವೇಳೆಗೆ ಸರಿಯಾಗಿ ವ್ಯಾಪಾರಕ್ಕಾಗಿ ಭಾರತಕ್ಕೆ ಬಂದರು. ಇಲ್ಲಿನ ಪರಿಸ್ಥಿತಿಯನ್ನು ಉಪಯೋಗಿಸಿಕೊಂಡು ದೇಶದ ಆಡಳಿತವನ್ನು ವ್ಯಾಪಾರಕ್ಕಾಗಿ ತಮ್ಮ ವಶಕ್ಕೆ ತೆಗೆದುಕೊಳ್ಳುವುದರಲ್ಲಿ ಯಶಸ್ವಿಯಾದರು ಆಡಳಿತಗಾರರಾದರು. ನಮ್ಮ ಒಳ ಜಗಳದಿಂದ ಈಸ್ಟ್ ಇಂಡಿಯಾ ಕಂಪನಿಗೆ ಲಾಭವಾಯಿತು. ಭಾರತೀಯ ಅರಸರುಗಳನ್ನು ಸುಲಭವಾಗಿ ಗೆದ್ದರು. ಬ್ರಿಟಿಷರು ವ್ಯಾಪಾರಕ್ಕಾಗಿ ಬಂದವರು ಇಲ್ಲೇ ಉಳಿದರು. ಬ್ರಿಟಿಷರ ರಾಜ್ಯ ವಿಸ್ತರಣಾ ನೀತಿಯನ್ನು ಭಾರತೀಯ ರಾಜರುಗಳು ವಿರೋಧಿಸಿದರು. ಹೈದರಾಲಿ, ಮೈಸೂರಿನ ಹುಲಿ ಟಿಪ್ಪು ಸುಲ್ತಾನ್, ಕಿತ್ತೂರು ರಾಣಿ ಚೆನ್ನಮ್ಮ, ನಾನಾ ಸಾಹೇಬ್, ರಾಣಿ ಲಕ್ಷ್ಮೀಬಾಯಿ, ತಾಂತ್ಯಾಟೋಪಿ ಮುಂತಾದವರು

ಬ್ರಿಟಿಷರೊಂದಿಗೆ ಹೋರಾಡಿ, ವೀರ ಸ್ವರ್ಗ ಪಡೆದರು. ಭಾರತದ ಕೈಗಾರಿಕೆಗಳು ನಾಶವಾದವು ಮತ ಭೇದಗಳು ಹೆಚ್ಚಾದವು ರೈತರ ಮೇಲೆ ಹೇರಿದ ತೆರಿಗೆ, ನೀಲಿ ಬೆಳೆಯ ಮೇಲೆ ನಿಗದಿ, ಹತ್ತಿ ರಫ್ತು, ಬಟ್ಟೆ ಅಮದು ಐಶ್ವರ್ಯ ದೋಚುವ ದಬ್ಬಾಳಿಕೆಯಿಂದ ಭಾರತ ದಾರಿದ್ರ್ಯದ ಬೀಡಾಯಿತು. ಭಾರತೀಯರು ಅತೃಪ್ತರಾದರು. 1857 ರಲ್ಲಿ ಬ್ರಿಟಿಷರ ವಿರುದ್ಧ ಮಹಾ ಪ್ರತಿರೋಧದ ಸಿಪಾಯಿ ದಂಗೆ ಆಯಿತು. ಇದೇ ಭಾರತದ ಮೊದಲ ಸ್ವಾತಂತ್ರ್ಯ ಸಂಗ್ರಾಮ ಹೋರಾಟಕ್ಕೆ ನಾಂದಿಯಾಯಿತು.

ಅನೇಕ ನಾಯಕರನ್ನು ಬ್ರಿಟಿಷರು ಗಲ್ಲಿಗೇರಿಸಿದರು. ಗಡೀಪಾರು ಮಾಡಿದರು. ಭಾರತೀಯರು ಒಗ್ಗಟ್ಟಾಗಿಲ್ಲವಾದ್ದರಿಂದ ಇದರಲ್ಲಿ ಅವರಿಗೆ ಗೆಲುವು ಸಿಗಲಿಲ್ಲ. ಇದೇ ಸಂದರ್ಭದಲ್ಲಿ ನಮ್ಮ ದೇಶದ ಹಳೇ ಪದ್ಧತಿಗಳು, ನಂಬಿಕೆಗಳು ಭಾರತದ ಗುಲಾಮಗಿರಿಗೆ ಕಾರಣವೆಂದು, ಅನೇಕ ಸಾಮಾಜಿಕ ಸುಧಾರಣೆಗಳನ್ನು ತರಲು ಪ್ರಯತ್ನಿಸಿದ ರಾಜಾರಾಮ್ ಮೋಹನ್ ರಾಯ್‌ರವರು, ಭಾರತೀಯರನ್ನು ಎಚ್ಚರಿಸಿದರು. "ನಮ್ಮ ದೇಶಕ್ಕೆ ಉಕ್ಕಿನಂತಹ ಮನುಷ್ಯರು ಬೇಕು. ಅವರು ನಿರ್ಭೀರೂ, ಬಲಿಷ್ಠರೂ ಆಗಿರಬೇಕು. ದೌರ್ಬಲ್ಯ ಒಂದು ಪಾಪ" ಎಂಬ ಮಾತುಗಳಿಂದ ವಿವೇಕಾನಂದರು ಭಾರತೀಯರನ್ನು ಎಚ್ಚರಿಸಿದರು, ಚೇತನಗೊಳಿಸಿದರು. ಮಹದೇವ ಗೋವಿಂದ ರಾನಡೆ, ಸ್ವಾಮಿ ದಯಾನಂದ, ಅನ್ನಿಬೆಸೆಂಟ್, ಈಶ್ವರಚಂದ್ರ ಸಾಗರರು ಸೇರಿದಂತೆ ಇನ್ನಿತರ ಸಮಾಜ ಸುಧಾರಣೆಯ ಅಗ್ರ ನಾಯಕರುಗಳು ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ಚಳವಳಿಗೆ ಒಂದು ರೀತಿಯ ಮುನ್ನುಡಿಗಳನ್ನು ನೀಡಿದರು.

ದೇಶದ ಹಿರಿಮೆಯನ್ನು ತಿಳಿಸಲು ಒಂದು ರಾಷ್ಟ್ರಧ್ವಜ, ಒಂದು ರಾಷ್ಟ್ರ ಭಾಷೆ, ಒಂದು ರಾಷ್ಟ್ರ ಗೀತೆ ಅಗತ್ಯವೆಂಬುದು ಅರಿವಾಯಿತು. ಆ ವೇಳೆಗೆ ಸರಿಯಾಗಿ ಬಂಗಾಳಿ ಭಾಷೆಯಲ್ಲಿ ಸ್ಫೂರ್ತಿದಾಯಕವಾದ "ಆನಂದ ಮಠ" ಕಾದಂಬ–ರಿಯಲ್ಲಿ ಸ್ವಾತಂತ್ರ್ಯ ಸಮರಗೀತೆಯಾಗಿ "ವಂದೇ ಮಾತರಂ" ಮೊಳಗಿ ಜನರಲ್ಲಿ ದೇಶಭಕ್ತಿ ಮೂಡುವಂತೆ ಮಾಡಿತು. "ಬಂಕಿಮ ಚಂದ್ರ ಚಟ್ಟೋಪಾಧ್ಯಾಯರ ಈ ಗೀತೆಯು "ಬಂಗಾರ್ ದರ್ಶನ್" ಎಂಬ ಪತ್ರಿಕೆಯಲ್ಲಿ 1876ರಲ್ಲಿ ಪ್ರಕಟವಾಯಿತು. ಇದು ಭರತ ಖಂಡದ ಚೆಲುವನ್ನು, ತಾಯ್ನಾಡಿನ ಪ್ರೇಮವನ್ನು ಅಭಿವ್ಯಕ್ತಿಸುತ್ತದೆ.

ಸ್ವಾತಂತ್ರ್ಯ ಚಳವಳಿಯ ಸಂದರ್ಭದಲ್ಲಿ ಜನರು ಈ ಸಮರ ಗೀತೆಯನ್ನು ಹಾಡಿದರು. ಇದು ನಮ್ಮ ಜನರಲ್ಲಿ ದೇಶಭಕ್ತಿ ಮೂಡುವಂತೆ ಮಾಡಿತು. ದೇಶಪ್ರೇಮಿಗಳ ಮೆಚ್ಚಿನ ಮಂತ್ರವಾಯಿತು. 1896 ರಲ್ಲಿ ಕಾಂಗ್ರೆಸ್ ಅಧಿವೇಶನದಲ್ಲಿ ರವೀಂದ್ರನಾಥ ಠಾಗೂರ್‌ರವರು ಹಾಡಿದರು. ಎಲ್ಲರಿಗೂ ರೋಮಾಂಚನ. "ವಂದೇ ಮಾತರಂ" ಶಬ್ದ ಬ್ರಿಟಿಷರಿಗೆ ಕರ್ಣ ಕಠೋರವಾಯಿತು. 'ವಂದೇ ಮಾತರಂ' ಎಂದರೆ ಅಪರಾಧವಾಯಿತು. ಈ ಗೀತೆಯನ್ನು ಹಾಡಿದುದರಿಂದ ಅನೇಕ ನಾಯಕರು, ಯುವಕರು ಸೆರೆಮನೆಗೆ ಹೋದರು.

ಬ್ರಿಟೀಷ್ ಆಡಳಿತಗಾರರು ಹಾಡನ್ನು ಕೇಳಲಾರದೆ ಹೋರಾಟಗಾರರನ್ನು ಸದೆಬಡಿದರು. ಇವರು ರಾಷ್ಟ್ರ ಪ್ರೇಮಕ್ಕಾಗಿ, ದೇಶದ ಸ್ವಾತಂತ್ರ್ಯಕ್ಕಾಗಿ ಹಾಡುತ್ತಾ ತಮ್ಮ ಪ್ರಾಣವನ್ನು ಕೊಟ್ಟರು. ಕೊನೆ ಉಸಿರುವವರೆಗೆ ವಂದೇ ಮಾತರಂ ಹಾಡಿದರು. ಈ ದಬ್ಬಾಳಿಕೆಗೆ ಬಂಗಾಳಿ ಯುವಕರು ರೊಚ್ಚಿಗೆದ್ದರು. ಬ್ರಿಟೀಷರನ್ನು ಕೊಲೆ ಮಾಡಲು ಪ್ರಯತ್ನಿಸಿದರು. ಪುದಿರಮ ಎಂಬ 15 ವರ್ಷದ ಹುಡುಗ ಮತ್ತು ಕನ್ನಯ್ಯಲಾಲ್ ಎಂಬ ಯುವಕನನ್ನು ಗಲ್ಲಿಗೇರಿಸಿದರು. ಈ ಹುಡುಗರು " ವಂದೇ ಮಾತರಂ" ಎಂದು ಉಚ್ಚರಿಸುತ್ತಲೇ ಗಲ್ಲಿಗೇರಿದರು. ನಾಡಿನ ಜನರಿಗೆ ಇದು ಕೇವಲ ಗೀತೆ ಮಾತ್ರವಲ್ಲ, ಬೆಂಕಿಯ ಜ್ವಾಲೆಯಾಗಿತ್ತು. ಸಮರ್ಪಣ ಮಂತ್ರವಾಗಿತ್ತು.

ಬಂಗಾಳದಲ್ಲಿ 1906 ರಲ್ಲಿ ಬಿಪಿನ್ ಚಂದ್ರಪಾಲ್ "ವಂದೇ ಮಾತರಂ" ಪತ್ರಿಕೆ ಆರಂಭಿಸಿದರು. 1907 ರಲ್ಲಿ ಪತ್ರಿಕೆಯ ಮೇಲೆ ದೇಶದ್ರೋಹ ಅಪರಾಧ ಹೊರಿಸಿ ಬಂಧಿಸಿದರು. 1906 ರಲ್ಲಿ ಪ್ರಥಮ ಕಾಗ್ರೆಸ್‌ನಲ್ಲಿ ರೂಪಿಸಿದ ರಾಷ್ಟ್ರಧ್ವಜದ ಮಧ್ಯದಲ್ಲಿ "ವಂದೇ ಮಾತರಂ" ಎಂದು ಬರೆದಿತ್ತು. ತಮಿಳು ನಾಡಿನಲ್ಲಿ ಸುಬ್ರಹ್ಮಣ್ಯ ಭಾರತೀಯರು ತಮಿಳಿನಲ್ಲಿ ರಾಷ್ಟ್ರಗೀತೆಯನ್ನು ರಚಿಸಿ ಜನರನ್ನು ಹುರಿದುಂಬಿಸಿದರು. ಭಾರತೀಯ ಭಾಷಾ ಫಲವಾಗಿ ಭಾಷಾ ಪತ್ರಿಕೆಗಳ ಪ್ರಕಟಣೆಯನ್ನು ರದ್ದುಗೊಳಿಸಿದರು.

ಸಂಪಾದಕರುಗಳಿಗೆ ತೀವ್ರ ಶಿಕೆ, ಸೆರೆಮನೆ ವಾಸ ವಿಧಿಸಿದರು. ಎ.ಓ. ಹ್ಯೂಮ್‌ರವರು ಜನಗಳಲ್ಲಿ ಅಸಮಾಧಾನ ಹೆಚ್ಚುವುದನ್ನು ತಪ್ಪಿಸಲು ಕುಂದುಕೊರತೇಗಳನ್ನು ಹೇಳಿಕೊಳ್ಳಲು ಅವಕಾಶ ಕೊಡಲು 1885 ರಲ್ಲಿ ನ್ಯಾಷನಲ್ ಕಾಂಗ್ರೆಸ್ ಸಂಸ್ಥೆಯನ್ನು ಸ್ಥಾಪಿಸಿದ್ದರು. ಅವರೇ ಅದರ ಮೊದಲ ಅಧ್ಯಕ್ಷರು. ದಾದಾಬಾಯಿ ನವರೋಜಿ, ಫಿರೋಜ್ ಷಾ ಮೆಹತಾ, ಗೋಖಲೆ, ಸುರೇಂದ್ರನಾಥ ಬ್ಯಾನರ್ಜಿ, ಬಿಪಿನ್ ಚಂದ್ರಪಾಲ್, ಲಾಲ ಲಜಪತರಾಯ್, ಬಾಲಗಂಗಾಧರ್ ತಿಲಕ್‌ರವರು ಕಾಂಗ್ರೆಸ್‌ನ ಈ ರಾಷ್ಟ್ರ ಸಂಗ್ರಾಮದಲ್ಲಿ ಧುಮುಕಿದರು. ಹಕ್ಕಿಗಾಗಿ ದೇಶದ ಸ್ವಾತಂತ್ರ್ಯಕ್ಕಾಗಿ ಹೊರಾಡುವ ಮನೋವೃತ್ತಿಯನ್ನು ಜನರಲ್ಲಿ ಮೂಡಿಸಿದರು ಲೋಕಮಾನ್ಯ ಬಾಲಗಂಗಾಧರ ತಿಲಕರು. ಸ್ವಾತಂತ್ರ್ಯ ಆಕಾಂಕ್ಷೆ ಹೆಚ್ಚಿಸಲು "ಕೇಸರಿ" ಪತ್ರಿಕೆಯನ್ನು ಪ್ರಕಟಿಸಿ ಪ್ರಚೋದಕವಾದ ಲೇಖನಗಳನ್ನು ಬರೆದರು. "ಸ್ವರಾಜ್ಯ ನಮ್ಮ ಜನ್ಮ ಸಿದ್ಧ ಹಕ್ಕು" ಎಂದು ಸಾರಿದರು.

**ಬಂಗಾಳ ವಿಭಜನೆ :** ಬ್ರಿಟಿಷರು ಬಂಗಾಳ ದೇಶವನ್ನೇ ಇಬ್ಭಾಗ ಮಾಡಿದರು. ಹಿಂದು ಮುಸ್ಲಿಂರ ಮಧ್ಯ ಜಗಳ ಹುಟ್ಟಿಸಲು ಪ್ರಯತ್ನಿಸಿದರು. ಇದರಿಂದ ದೇಶದಲ್ಲಿ ಒಂದು ಕ್ರಾಂತಿ ಉಂಟಾಯಿತು. ಸತ್ಯಾಗ್ರಹಿಗಳು ಎಲ್ಲಾ ಕಡೆ ವಂದೇ ಮಾತರಂ ಹಾಡಿದರು. ವಿದೇಶಿ ವಸ್ತು ಮತ್ತು ಬಟ್ಟೆ ಸುಟ್ಟರು. ಸ್ವದೇಶಿ ವಸ್ತುಗಳ ಉಪಯೋಗ ಪ್ರಾರಂಭವಾಯಿತು. ಸ್ವದೇಶಿ ಶಾಲೆಗಳು ಪ್ರಾರಂಭವಾದವು.

ಬಿಪಿನ್ ಚಂದ್ರಪಾಲ್, ಅರವಿಂದ್ ಘೋಷ್, ಲಾಲ ಲಜಪತ್ ರಾಯ್, ಭಗತ್‌ಸಿಂಗ್, ಸಾಹೋರ್ಕರ್ ಮುಂತಾದ ಅನೇಕ ನಾಯಕರುಗಳು ಸ್ವಯಾತಂತ್ರ್ಯಕ್ಕಾಗಿ ಬ್ರಟಿಷರ ಬಳಿ ಬೇಡುವುದು ಸರಿಯಲ್ಲವೆಂದು ಹಿಂಸಾ ಚಳವಳಿಯ ಕ್ರಾಂತಿ ಮಾರ್ಗ ಅನುಸರಿಸಿದರು. ಇದರಲ್ಲಿ ಜನಸಾಮಾನ್ಯರು ಭಾಗವಹಿಸಲು ಕಷ್ಟವಾಯಿತು. ಜನರಿಂದ ಹೆಚ್ಚು ಬೆಂಬಲ ಸಿಗಲಿಲ್ಲ. ಹಿಂಸಾತ್ಮಕ ಕ್ರಾಂತಿಕಾರಿ ಚಳವಳಿಗೆ ಹೆಚ್ಚು ಜನ ಆಕರ್ಷಿತರಾಗಲಿಲ್ಲ. ಈ ವೇಳೆಗೆ ಸರಿಯಾಗಿ ದಕ್ಷಿಣ ಆಫ್ರಿಕಾದಲ್ಲಿ ವಕೀಲಿ ವೃತ್ತಿ ಮಾಡುತ್ತಿದ್ದ ಮೋಹನದಾಸ ಕರಂಚಂದ್ ಗಾಂಧಿಯವರು ಭಾರತಕ್ಕೆ ಹಿಂದಿರುಗಿ ತಮ್ಮ ಅಹಿಂಸಾತ್ಮಕ ಚಳವಳಿಯನ್ನು ಸ್ವಾತಂತ್ರ್ಯ ಹೋರಾಟಕ್ಕೆ ಕೊಡುಗೆಯಾಗಿ ನೀಡಿದರು.

ಗಾಂಧೀಜಿಯವರು ಮೊದಲು ರಾಜಕೀಯಕ್ಕೆ ಪ್ರವೇಶಿಸದೆ ಭಾರತೀಯರ ಕಷ್ಟ ಕಾರ್ಪಣ್ಯಗಳನ್ನು ತನ್ನದೇ ಆದ ಸತ್ಯಾಗ್ರಹ ಮಾರ್ಗದಲ್ಲಿ" ನಾವು ಯಾರಿಗೂ ಅಪಾಯ ಉಂಟು ಮಾಡಬಾರದು. ಅನ್ಯಾಯದ ವಿರುದ್ಧ ಹೋರಾಡಿ, ಶತ್ರುಗಳನ್ನು ಪ್ರೀತಿಸಿ, ಯಾವತ್ತೂ ನಿಜವನ್ನೇ ನುಡಿಯಿರಿ. ಭೀತಿ ತ್ಯಜಿಸಿರಿ. ಒಗ್ಗಟ್ಟಾಗಿರಿ ಎಂಬ ಸಂದೇಶವನ್ನು ಇಡೀ ಭಾರತಕ್ಕೆ ನೀಡಿದರು. ಬಿಟಿಷ್ ಪ್ರಭುತ್ವದ ವಿರುದ್ಧ ಶಾಂತಿಯುತವಾದ ಅಸಹಕಾರ ಚಳವಳಿಯೇ ಉತ್ತಮಮಾರ್ಗ ಎಂಬುದೇ ಗಾಂಧಿಜಿ ಸಂದೇಶ.

**ಜಲಿಯನ್ ವಾಲಾಬಾಗ್ :** 1919 ರಲ್ಲಿ ದೇಶಾದ್ಯಂತ ಹರತಾಳ ಆಚರಣೆ ನಡೆಯಿತು. ಅಮೃತಸರದಲ್ಲಿ ಜನಪ್ರಿಯರಾಗಿದ್ದ ಡಾ: ಕಿಟ್ಲು ಮತ್ತು ಸತ್ಯಪಾಲ್ ಅವರ ಬಂಧನ ಮತ್ತು ಗಡೀಪಾರು ಆಯಿತು. ಇದನ್ನು ಪ್ರತಿಭಟಿಸಲು ಸಾರ್ವಜನಿಕರು "ಜಲಿಯನ್ ವಾಲಾಬಾಗ್" ಎಂಬ ಮೈದಾನದಲ್ಲಿ ಪ್ರತಿಭಟನಾ ಸಭೆ ಸೇರಿದ್ದರು. ಬ್ರಿಟಿಷ್ ಸೈನಿಕರು ಗುಂಡು ಹಾರಿಸಿ ಜನ ತಪ್ಪಿಸಿಕೊಂಡು ಹೋಗಲು ಅವಕಾಶ ಕೊಡದೆ ಅಮಾನುಷ ರೀತಿಯಲ್ಲಿ ಕೊಲೆ ಮಾಡಿದರು. "ಜಲಿಯನ್ ವಾಲಾಬಾಗ್" ಹತ್ಯಾಕಾಂಡ, ನಮ್ಮ ಸ್ವಾತಂತ್ರ್ಯ ಸಮರದ ಮುಖ್ಯ ಘಟನೆ. ಗಾಂಧೀಜಿಯವರು ಸತ್ಯಾಗ್ರಹ, ಅಹಿಂಸಾತ್ಮಕ ಅಸಹಕಾರ ಚಳವಳಿಯಿಂದ ಸ್ವಾತಂತ್ರ್ಯ ಹೋರಾಟಕ್ಕೆ ಒಂದು ಹೊಸ ತಿರುವನ್ನೇ ಕೊಟ್ಟರು. " ನಾವು ನ್ಯಾಯಾಲಯಗಳು, ಕಚೇರಿಗಳು, ಶಾಲೆಗಳಿಗೆ ಹೋಗದೆ ಅವರೊಂದಿಗೆ ಸಹಕರಿಸದಿದ್ದರೆ, ಅವರ ಸರಕುಗಳನ್ನು ಕೊಳ್ಳದಿದ್ದರೆ ಸ್ವಾವಲಂಬನಾ ಬುದ್ಧಿ ಹೆಚ್ಚಿಸಿಕೊಂಡರೆ, ಒಂದೇ ವರ್ಷದಲ್ಲಿ ಸ್ವರಾಜ್ಯ ಸಿಕ್ಕೇ ಸಿಗುತ್ತದೆ" ಎಂದರು ಗಾಂಧೀಜಿ. ದೇಶದ ಸಮಸ್ಯೆಗಳನ್ನು ಬಿಡಿಸಲು ರಚನಾತ್ಮಕ ಕಾರ್ಯಗಳನ್ನು ರೂಪಿಸಿ ಸ್ವಾತಂತ್ರವಾಗಿ ಜೀವಿಸುವ ಮಾರ್ಗ ನೀಡಿ ಸಾಮಾನ್ಯರೂ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಲು ಅವಕಾಶ ಮಾಡಿಕೊಟ್ಟರು.

ಜನಸಾಮಾನ್ಯರೂ ಸಾಮೂಹಿಕವಾಗಿ ಆಚರಿಸುವ ಚಳವಳಿಯಾದ್ದರಿಂದ ಇದು ದೇಶದ ಎಲ್ಲಾ ಹಳ್ಳಿ ಹಳ್ಳಿಗಳಿಗೂ ಹರಡಿತು. ಜನತೆ ಸ್ವಾಗತಿಸಿದರು. ಹೆಮ್ಮೆಯಿಂದ ಭಾಗವಹಿಸಿದರು. ತ್ಯಾಗಕ್ಕೆ ಸಿದ್ಧರಾದರು. ಕಂದಾಯ ಕೊಡುವುದನ್ನು ಬಹಿಷ್ಕರಿಸುವ ಚಳವಳಿಯಿಂದ ರೈತರಿಗೆ ಅಸಹಕಾರ ಚಳವಳಿಯಲ್ಲಿ ಅಪಾರ ನಂಬಿಕೆ ಬಂದಿತು. ಭಾಗವಹಿಸಲು ಪ್ರಾರಂಭಿಸಿದರು. ಜನತೆಯಿಂದ ದೊರೆತ ಬೆಂಬಲದಿಂದ ಗಾಂಧಿಯವರು ಅಂಹಿಸೆಯ ಮಂತ್ರವಾದ ಸತ್ಯಾಗ್ರಹವನ್ನು ಪ್ರಾರಂಭಿಸಿದರು. ಆಂಗ್ಲರು ಅಸಹಕಾರ ಚಳವಳಿಗೆ ಮಣಿಯಲಿಲ್ಲ. ಹೀಗಾಗಿ, ಗಾಂಧೀಜಿಯವರು 1942 ರ ಆಗಸ್ಟ್ 9 ರಂದು " ಬ್ರಿಟಿಷರೇ ಭಾರತ ಬಿಟ್ಟು ತೊಲಗಿ" ಎಂಬ ಘೋಷಣೆಯನ್ನು ಮೊಳಗಿಸಿದರು. ಇದೇ "ಕ್ವಿಟ್ ಇಂಡಿಯಾ ಚಳವಳಿ", 'ಮಾಡು ಇಲ್ಲವೆ ಮಡಿ' ಎಂಬ ಸಂದೇಶದೇಶದಲ್ಲೆಲ್ಲಾ ಹರಡಿ ಜನ ಬೀದಿಗಿಳಿದು ಹೋರಾಡಲು ಆರಂಭಿಸಿದರು. ದೇಶಾದ್ಯಂತ ಎಲ್ಲಾ ನಾಯಕರ ಬಂಧನ ಆಯಿತು. ಕ್ಯಾಂತಿಯ ವಾತಾವರಣ ಹುಟ್ಟಿತು. ನಾಯಕರೆಲ್ಲಾ ಜೈಲಿನಲ್ಲಿ ಇದ್ದುದರಿಂದ ಯುವಕರು ಮತ್ತು ವಿದ್ಯಾರ್ಥಿಗಳೇ ಚಳವಳಿಯ ಮುಂದಾಳುಗಳಾಗಿ ಬೃಹತ್ ಪ್ರಮಾಣದಲ್ಲಿ ಭಾಗವಹಿಸಿದರು.

ಶಾಲಾ ಕಾಲೇಜುಳನ್ನು ಮುಚ್ಚಬೇಕಾಯಿತು. ಜನರು ಕಾನೂನು ಉಲ್ಲಂಘಿಸಿ ಜೈಲಿಗೆ ಹೋದರು. ಧ್ವಜ ಹಾರಿಸುವುದು, ಸ್ವಾತಂತ್ರ್ಯಗೀತೆಗಳನ್ನು ಹಾಡುವುದು, ಹರತಾಳ ನಡೆಸುವುದು ಮಾಮೂಲಾಯಿತು. ಗೀತೆಗಳನ್ನು ಹಾಡುತ್ತಾ ಮೆರವಣಿಗೆ ಹೊರಟರೆ ಲಾಟಿ ಛಾರ್ಜು, ಗ್ಯಾಸ್ ಸಿಡಿತ, ಕೊನೆಗೆ ಗುಂಡಿನ ಏಟು, ಇದು ನಿತ್ಯದ ಕಾರ್ಯಕ್ರಮ. ಒಂದು ಊರಿನಲ್ಲಿ ಅಲ್ಲ ದೇಶಾದ್ಯಂತ ಜೈಲುಗಳು ಭರ್ತಿಯಾದವು. ಕೆಲವು ಕಡೆ ವಿಧ್ವಂಸಕ ಜೈಲುಗಳು ಭರ್ತಿಯಾದವು. ಕೆಲವು ಕಡೆ ವಿಧ್ವಂಸಕ ಕೃತ್ಯಗಳೂ ನಡೆದವು. ಅನೇಕ ಕಡೆ ಅಂಚೆ ಕಚೇರಿ, ಸರ್ಕಾರಿ ಕಚೇರಿಗಳಿಗೆ ಬೆಂಕಿ ಇಟ್ಟರು. ನಿತ್ಯವು ಒಂದಲ್ಲ ಒಂದು ಕಡೆ ಗೋಲಿಬಾರ್, ಒಬ್ಬರೋ ಇಬ್ಬರೋ ಸಾಯುತ್ತಿದ್ದರು. ಆದರೂ ಜನರಲ್ಲಿ ಛಲ ಹೋಗಲಿಲ್ಲ. ಪ್ರಾಣ ಕೊಡಲು ಸಿದ್ಧರಾಗಿದ್ದರು. ಎಷ್ಟೋ ಜನ ಗುಪ್ತವಾಗಿ ಕಾರ್ಯಾಚರಣೆ ನಡೆಸಿ ಯಾರಿಗೂ ತಿಳಿಯದಂತೆ ಪೊಲೀಸರ ಗುಂಡಿನ ಏಟಿಗೆ ಬಲಯಾಗಿದ್ದಾರೆ. ಸುಭಾಷ್‌ಚಂದ್ರ ಬೋಸರು ಭಾರತದಿಂದ ಜರ್ಮನಿಕಗೆ ಹೋಗಿ, ಅಲ್ಲಿಂದ ಜಪಾನ್ಗೆ ಹೋಗಿ ಅಲ್ಲಿ "ಅಜಾದ್ ಹಿಂದ್ ಫೌಜ್' ಸೈನ್ಯ ಕಟ್ಟಿ ಭಾರತದ ಸ್ವಾತಂತ್ರ್ಯಕ್ಕಾಗಿ ನಾಡಿನ ಹೊರಗಡೆಯಿಂದ ಬಿಟಿಷರ ಮೇಲೆ ಯುದ್ಧ ಘೋಷಿಸಿದರು.

ಆಡಳಿತಗಾರರಿಗೆ ಹೊರಗಡೆ ಮಹಾಯುದ್ಧ, ಒಳಗಡೆ ಚಳವಳಿ. ಲಕ್ಷಾಂತರ ಜನ ಜೈಲಿಗೆ ಹೋದರು. ಲಾಟಿ ಏಟು ಗುಂಡಿನ ಏಟು ತಿಂದರು. ರೈಲು ಕಂಬಿ ಕಿತ್ತರು. ಸೇತುವೆಗಳಿಗೆ ಬಾಂಬು ಇಟ್ಟು ನಾಶಪಡಿಸಿದರು. ಸರ್ಕಾರ ನಡೆಸುವುದೇ ಕಷ್ಟವಾಯಿತು.
ಯುದ್ಧ ಮುಗಿದ ಮೇಲೆ ಬ್ರಿಟನ್‌ನಲ್ಲಿ ಕನ್ಸರೆಟಿವ್ ಪಕ್ಷ ಹೋಗಿ, ಲೇಬರ್ ಪಕ್ಷ ಆಟಳಿತಕ್ಕೆ ಬಂದ ಮೇಲೆ, ಭಾರತೀಯರು ಶಾಶ್ವತ ಶತ್ರುಗಳಾಗಬಾರದೆಂದು, ಮಾತು ಕತೆ ನಡೆಸಿ, ಭಾರತಕ್ಕೆ ಸ್ವಾತಂತ್ರ್ಯ ಆಡಳಿತಕೊಡಲು ತೀರ್ಮಾನಿಸಿದಾಗ ಜಿನ್ನಾರವರ ಹಟದಿಂದ ದೇಶ ಇಬ್ಭಾಗವಾಯಿತು.

ಬ್ರಿಟಿಷರ ಆಡಳಿತ ಕೊನೆಯಾಯಿತು. ಭಾರತೀಯರು ಕಂಡ ಕನಸು ನನಸಾಯತು. ಭಾರತಕ್ಕೆ ಸ್ವಾತಂತ್ರ್ಯ ಲಭಿಸಿತು. ಇದರೊಂದಿಗೆ ಸ್ವಾತಂತ್ರ್ಯ ಸಂಗ್ರಾಮವು ಮುಕ್ತಾಯವಾಯಿತು.
ಭಾರತದಲ್ಲಿ 1947 ನೇ ಆಗಸ್ಟ್ 15 ರಂದು ಸ್ವಾತಂತ್ರ್ಯ ದಿನ ಆಚರಿಸುವಾಗ ಗಾಂಧೀಜಿಯವರು "ನೌಖಾಲಿ"ಯಲ್ಲಿ ಹಿಂದು ಮುಸಲ್ಮಾನರ ಏಕತೆಗೆ ಕಾಲು ನಡಿಗೆಯಲ್ಲಿ ಸುತ್ತಾಡುತ್ತಿದ್ದರು. 1948 ರ ಜನವರಿ 30 ಗಾಂಧೀಜಿಯವರು ದುಷ್ಕರ್ಮಿಗಳಿಂದ ಹತ್ಯೆಗೀಡಾಗಿ ಹುತಾತ್ಮರಾದರು.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101